# ಮನೆಯಲ್ಲಿ ಮಹಾಮನೆ: ಬಸವಾದಿ ಶಿವಶರಣರ ವಚನಗಳು ಬದುಕಿಗೆ ದಾರಿದೀಪ



**ಮಹಾಲಿಂಗಪುರ :** ಬಸವಾದಿ ಶಿವಶರಣರ ವಚನಗಳು ನಮ್ಮ ಬದುಕಿಗೆ ದಾರಿದೀಪಗಳಾಗಿವೆ. ವಚನಗಳ ಬಳಕೆಯನ್ನು ಮಾಡುವುದರ ಜೊತೆಗೆ ಅವುಗಳಲ್ಲಿ ಅಡಕವಾಗಿರುವ ನೀತಿ ಬೋಧನೆಗಳನ್ನು ನಮ್ಮ ಬದುಕಿನಲ್ಲಿ ಅಂತರ್ಗತ ಮಾಡಿಕೊಳ್ಳುವದು ಅವಶ್ಯಕವಾಗಿದೆ ಎಂದು ನಿವೃತ್ತ ಉಪನ್ಯಾಸಕ ಜಿ.ಎ.ಮಠಪತಿ ಹೇಳಿದರು.

ಪಟ್ಟಣದ ಶಾಂತಿನಿಕೇತನ ಬಡಾವಣೆಯ ಬಸಪ್ಪ ಕೊಪ್ಪದ ಅವರ ಮನೆಯಲ್ಲಿ ಬಸವ ಬಳಗದಿಂದ ಜರುಗಿದ 186 ನೇ ತಿಂಗಳ 'ಮನೆಯಲ್ಲಿ ಮಹಾಮನೆ' ಕಾರ್ಯಕ್ರಮದಲ್ಲಿ

ಭಾಗವಹಿಸಿ ಮಾತನಾಡಿದ ಅವರು ಇಂದಿನ ಮಕ್ಕಳಿಗೆ ಉತ್ತಮ ಸಂಸ್ಕೃತಿ, ಸಂಸ್ಕಾರ ನೀಡುವದು ಅವಶ್ಯಕವಾಗಿದೆ ಎಂದರು.

ಶಿಕ್ಷಕರಾದ ಎಸ್.ಬಿ.ರಡ್ಡೇರಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕ ಎ.ಬಿ.ಗೌಡಪ್ಪನವರ, ಪುರಸಭೆ ಸಮುದಾಯ ಸಂಘಟನಾಧಿಕಾರಿ ಚಿದಾನಂದ ಮಠಪತಿ,ಶ್ರೀಮತಿ ಸರೋಜಿನಿ ಶಿರೋಳ, ಶ್ರೀಮತಿ ದ್ರಾಕ್ಷಾಯಣಿ ಮಂಡಿ, ಶಿಕ್ಷಕಿ ಎ.ಎ.ಕಿಚಡಿ ಮಾತನಾಡಿ ಬಸವಣ್ಣನವರ ವಚನ ಸಾಹಿತ್ಯದ ಹಿರಿಮೆ–ಗರಿಮೆ, ಪಂಚಾಚಾರ, ಅಷ್ಟಾವರಣಗಳ ಕುರಿತು ಮಾತನಾಡಿದರು.

ಬಸವರಾಜ ಕೊಪ್ಪದ ದಂಪತಿಗಳು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಗಿರೀಶ ಶಿರೋಳ ದಂಪತಿಗಳು ಕೊಪ್ಪದ ದಂಪತಿಗಳಿಗೆ ಬಸವಣ್ಣನವರ ಭಾವಚಿತ್ರ ನೀಡಿದರು.

ಬಸವ ಬಳಗದ ಅಧ್ಯಕ್ಷ ಸಿ.ಎಂ.ಕಟಗಿ, ಹಿರಿಯರಾದ ಶ್ರೀಶೈಲಪ್ಪ ಉಳ್ಳೇಗಡ್ಡಿ, ಗೋಲೇಶ ಅಮ್ಮಣಗಿ, ಮಾಜಿ ಶಾಸಕ ಬಿ.ಜಿ.ಜಮಖಂಡಿ, ಮಹಾಲಿಂಗ ಸಣ್ಣಕ್ಕಿ, ಜಿ. ಎಸ್. ಗೊಂಬಿ, ಶಿವಾನಂದ ಕೊಳಕಿ, ಈರಣ್ಣ ಕೊಪ್ಪದ, ಮುತ್ತು ಕೊಪ್ಪದ ಸೇರಿದಂತೆ ಬಸವಾಭಿಮಾನಿಗಳು ಪಾಲ್ಗೊಂಡಿದ್ದರು.

# ಸತ್ಸಂಗದಿಂದ ಮನಸ್ಸಿಗೆ ನೆಮ್ಮದಿ: ಬಸವಗೋಪಾಲಶ್ರೀ

**ಚಿಮ್ಮಡ :** ಕಟ್ಟೆಯ ಮೇಲೆ ಕುಳಿತು ಇನ್ನೊಬ್ಬರ ಕುರಿತು ಮಾತನಾಡುತ್ತ ನಮ್ಮ ಘನತೆ, ಗೌರವಗಳನ್ನು ನಾವೇ ಹಾಳು ಮಾಡಿಕೊಳ್ಳುವುದಕ್ಕಿಂತ ದೇವರು ಮಹಾಪುರುಷರ ಕುರಿತ ಚರ್ಚೆಮಾಡಿದಲ್ಲಿ ಮನಸ್ಸಿಗೆ ನೆಮ್ಮದಿ ದೊರಕುತ್ತದೆ ಎಂದು ಬಂಡಿಗಣಿ ಬಸವಗೋಪಾಲ ನೀಲಮಾಣಿಕ ಮಠದ ದಾನೇಶ್ವರ ಶ್ರೀ ಹೇಳಿದರು.

ಗ್ರಾಮದ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಸೋಮವಾರ ರಾತ್ರಿ ಹಮ್ಮಿಕೊಳ್ಳಲಾಗಿದ್ದ ಪಾದಯಾತ್ರಿಗಳ ಸ್ವಾಗತ ಹಾಗೂ ಸತ್ಸಂಗ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಸಾಧು ಸಂತರು,

ಮಹಾನ್ ಪುರುಷರ ಕುರಿತ ಚರ್ಚೆಯಿಂದ ಜ್ಞಾನವೃದ್ಧಿಯಾಗುತ್ತದೆ. ದೇಶಪ್ರೇಮ ಬೆಳೆಯುತ್ತದೆ ಹಾಗೂ ಮಕ್ಕಳಿಗೆ ದೇಶದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತದೆ. ನಾವು ಯಾರಿಗೂ



ಅನ್ಯಾಯ ಮಾಡಬಾರದು. ಅನ್ಯಾಯ ಸಹಿಸಲೂ ಬಾರದು. ದೇಶದ ವಿಷಯ ಬಂದಾಗ ಒಗ್ಗಟ್ಟಾಗಿರಬೇಕೆಂದರು.

ಬಾವಲತ್ತಿಯ ವಿಜಯ ವೇದಾಂಗ ಶ್ರೀ ಮಾತನಾಡಿ ದೇವರು ಧರ್ಮದಲ್ಲಿ ಜೊಳ್ಳು ಪೊಳ್ಳು ಹೋಗಿ ಗಟ್ಟಿ ಕಾಳುಗಳು ಮಾತ್ರ ಉಳಿಯಲಿವೆ.

ಶರಣ ಮಹಾತ್ಮರು ನಿಜ ಭಕ್ತರಲ್ಲಿ ಯಾವತ್ತೂ ನೆಲೆಸಿರುತ್ತಾರೆಂದರು.

ಯೂಥ ಕಾಂಗ್ರೆಸ್ ಅಧ್ಯಕ್ಷ ಪ್ರವೀಣ ಪೂಜಾರಿ ಮಾತನಾಡಿ, ಬಂಡಿಗಣಿ ಮಠದ ಇತಿಹಾಸ ಶ್ರೀಗಳ ಸಾರ್ವಜನಿಕ ಸೇವೆಗಳ ಕುರಿತು ವಿವರಿಸಿದರು.

ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ, ಬಿ. ಎಸ್. ಪಾಟೀಲ, ಆರ್. ಎಂ. ಬಗನಾಳ, ಹರಳಯ್ಯ ಅಥಣಿ, ದುಂಡಪ್ಪಾ ಪಾಟೀಲ ಸೇರಿದಂತೆ ಇನ್ನೂ ಹಲವು ಪ್ರಮುಖರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ದಾನೇಶ್ವರ ಶ್ರೀಗಳನ್ನು ಬೃಹತ್ ರಥದ ಮೇಲೆ ಸಕಲ ವಾದ್ಯ ವೃಂದಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಸಾವಿರಾರು ಜನ ಭಕ್ತಾಧಿಗಳು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

# ಮನುಷ್ಯನ ನಿಜವಾದ ಸಂಪತ್ತು ಆರೋಗ್ಯ ರೋಗ ಬರದಂತೆ ಎಚ್ಚರಿಕೆ ವಹಿಸುವುದೆ ಜಾಣರ ಲಕ್ಷಣ





**ರಬಕವಿ–ಬನಹಟ್ಟಿ :** ಮನುಷ್ಯನ ನಿಜವಾದ ಸಂಪತ್ತುಆರೋಗ್ಯವಾಗಿದೆ.ಆರೋಗ್ಯವಂತ ಶರೀರದಲ್ಲಿ ಆರೋಗ್ಯವಂತ ಮನಸ್ಸು ಇರುತ್ತದೆ ಎಂದು ರಬಕವಿ ಬನಹಟ್ಟಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮ. ಕೃ. ಮೇಗಾಡಿ ಹೇಳಿದರು.

ತಾಲೂಕಿನ ನಾವಲಗಿ ಗ್ರಾಮದ ಶ್ರೀ ನೀಲಕಂಠೇಶ್ವರ ಸಭಾಭವನದಲ್ಲಿ ಹಳೇ ಹುಬ್ಬಳ್ಳಿ ನೀಲಕಂಠ ಮಠದ ಶಿವಶಂಕರ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಹಮ್ಮಿಕೊಂಡಿರುವ ಯೋಗ ಮತ್ತು ಸಂಸ್ಕಾರ ಶಿಬಿರದಲ್ಲಿ ಮಂಗಳವಾರ ಎಂಟನೇ ದಿನ ಭಾಗವಹಿಸಿ ಸನ್ಮಾನ ಸ್ವೀಕರಿಸಿ ಆಹಾರ ಮತ್ತು ಆರೋಗ್ಯ ವಿಷಯದ ಮೇಲೆ ಉಪನ್ಯಾಸ ನೀಡಿ ಮಾತನಾಡಿದರು.

ಆರೋಗ್ಯಪೂರ್ಣ ಜನರನ್ನೊಳಗೊಂಡ ಗ್ರಾಮಗಳು, ನಗರಗಳು, ಒಂದು ರಾಷ್ಟ್ರದ ಶಕ್ತಿ. ಹಣ, ಸಂಪತ್ತು ಕಳೆದುಕೊಂಡರೆ ಮತ್ತೆ ಗಳಿಸಬಹುದು. ಮನುಷ್ಯ ರೋಗ ಬಂದ ಮೇಲೆ ಪರದಾಡುವುದಕ್ಕಿಂತ ರೋಗ ಬಾರದಂತೆ ಎಚ್ಚರಿಕೆ ವಹಿಸುವುದು ಜಾಣರ ಲಕ್ಷಣ. ಉತ್ತಮ ಪೌಷ್ಠಿಕಾಂಶಗಳ ಪರಿಶುದ್ಧ ಆಹಾರವನ್ನು ಹಿತಮಿತವಾಗಿ ಸೇವಿಸಬೇಕು. ಶುದ್ಧ ನೀರು ಕುಡಿಯಬೇಕು. ಆರೋಗ್ಯವೇ ಭಾಗ್ಯಎಂಬಮಾತುಎಲ್ಲರೂಅರಿಯಬೇಕು. ಯೋಗ, ಧ್ಯಾನ, ಪ್ರಾಣಾಯಾಮ, ವಾಯು ವಿಹಾರಗಳು ಮನುಷ್ಯ ಆರೋಗ್ಯದಿಂದಿರಲು ಸಹಕಾರಿ. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಶಿಸ್ತು, ಸಂಸ್ಕೃತಿ,

ಸಂಸ್ಕಾರ ತುಂಬುವ ಇಂತಹ ಶಿಬಿರಗಳು ಪ್ರಯೋಜನಕಾರಿಯಾಗಿವೆ ಎಂದರು.

ರಬಕವಿ ಬನಹಟ್ಟಿ ತಾಲೂಕ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾದ ಮೃತ್ಯುಂಜಯ ರಾಮದುರ್ಗ ಅತಿಥಿಗಳಾಗಿ ಆಗಮಿಸಿ ಪ್ರತಿಯೊಬ್ಬರು ಆರೋಗ್ಯದ ಕಡೆಗೆ ಗಮನ ಹರಿಸಬೇಕು. ಸಮಾಜ ಮೆಚ್ಚುವಂತೆ ಬದುಕಬೇಕು. ಸಂಸ್ಕಾರದಿಂದಲೇ ನಮ್ಮ ಬದುಕಿಗೆ ಬೆಲೆ ಎಂದರು.

ಗ್ರಾಮದ ಹಿರಿಯರಾದ ಸುಭಾಷ ಕಂಪು, ಮಹಾಲಿಂಗಪುರದ ನಿವೃತ್ತ ಉಪನ್ಯಾಸಕ ಪಿ. ಎಸ್. ಸೋರಗಾಂವಿ ಇನ್ನಿತರರು ಪಾಲ್ಗೊಂಡಿದ್ದರು.

ಶಿಬಿರಾರ್ಥಿಗಳಿಂದ ಸಾಮೂಹಿಕ ಪ್ರಾರ್ಥನೆ ನಡೆಯಿತು. ಶಿಬಿರದ ಮಾರ್ಗದರ್ಶಕರಾದ ಬಸವರಾಜ ದೇವರು ಸ್ವಾಗತಿಸಿದರು. ಕಾಡೇಶ ಕಂಪು ನಿರೂಪಿಸಿ, ವಂದಿಸಿದರು. ತಾಲೂಕಿನ ವಿವಿಧ ಊರುಗಳಿಂದ 55 ಮಕ್ಕಳು ಈ ಶಿಬಿರದಲ್ಲಿ ಶಿಬಿರಾರ್ಥಿಗಳಾಗಿ ಪಾಲ್ಗೊಂಡಿರುವರು.

ಮೇ ಒಂದರಂದು, ಈ ಶಿಬಿರದ ಸಮಾರೋಪ ಸಮಾರಂಭವು ಜಗದ್ಗುರು ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯದಲ್ಲಿ ನಡೆಯಲಿದೆ ಎಂದು ಸಂಘಟಕರು ತಿಳಿಸಿದರು.

# ಹಿಂದೂ–ಮುಸ್ಲಿಂ ಬಾಂಧವರಿಂದ ಬಸವೇಶ್ವರ ಮೂರ್ತಿ ಪೂಜೆ

**ತೇರದಾಳ :** ವಿಶ್ವಗುರು ಬಸವೇಶ್ವರ ಜಯಂತಿ ನಿಮಿತ್ಯ ಇಲ್ಲಿನ ಬಸ್ ನಿಲ್ದಾಣ ಬಳಿ ಇರುವ ಬಸವೇಶ್ವರ ಮೂರ್ತಿಗೆಬುಧವಾರಹಿಂದೂಮುಸ್ಲಿಂಬಾಂಧವರು ಸೇರಿ ಪೂಜೆ ಸಲ್ಲಿಸುವ ಮೂಲಕ ಸೌಹಾರ್ದತೆಗೆ, ಸಮಾನತೆಗೆ ಸಾಕ್ಷಿಯಾದರು.

ಬೆಳಿಗ್ಗೆ ಹಿಂದೂಗಳು ಬಸವೇಶ್ವರ ಮೂರ್ತಿಗೆ ಪೂಜೆ ಸಲ್ಲಿಸುವ ವೇಳೆ ಸ್ವಯಂ ಪ್ರೇರಿತವಾಗಿ ಪೂಜಾ ಕಾರ್ಯಕ್ರಮದಲ್ಲಿ ಮುಸ್ಲಿಂ ಬಾಂಧವರು ಪಾಲ್ಗೊಂಡರು. ಅಟೋರಿಕ್ಷಾಗಳು ಬಹುತೇಕ ಬಸವೇಶ್ವರ ವೃತ್ತದಲ್ಲಿಯೇ ನಿಲ್ಲುತ್ತವೆ. ಅಟೋ ಚಾಲಕರು ಬಹುತೇಕರು ಮುಸ್ಲಿಮರಿದ್ದಾರೆ. ಪ್ರತಿ ವಾರ ಒಂದು ದಿನವಾದರೂ ಅಟೋ ಚಾಲಕರು ಬಸವೇಶ್ವರ ಮೂರ್ತಿಯನ್ನು ತೊಳೆಯುವ ಕಾಯಕ ಮಾಡುವ ಮೂಲಕ ಸಾರ್ವಜನಿಕರಿಂದ ಮೆಚ್ಚುಗೆಗೆ ಪಾತ್ರರಾಗಿದ್ದರು.

ಈಗ ಬಸವ ಜಯಂತಿಯಂದು ಬಸವೇಶ್ವರ ಮೂರ್ತಿ ಪೂಜೆಯಲ್ಲಿ ಪಾಲ್ಗೊಳ್ಳುವ ಮೂಲಕ ಸಮಾನತೆ ಸಾರಿದ ವಿಶ್ವಗುರು ಬಸವ ಜಯಂತಿ ಕಾರ್ಯಕ್ರಮವನ್ನು ಸಾರ್ಥಕಗೊಳಿಸಿದರು. ರಾಮಣ್ಣ ಹಿಡಕಲ್, ಶಂಕರ ಕುಂಬಾರ, ಕೇದಾರಿ ಪಾಟೀಲ, ದಾದಾ ಜಮಾದಾರ, ಇಕ್ಬಾಲ ಕೊರಬು, ನಾಸೀರ



ಕನಕವಾಡಕರ, ಅಸ್ಲಮ್ ಮುಲ್ಲಾ, ರಿಯಾಜ್ ಮುಲ್ಲಾ, ಮಹೇಶ ಹಂಜಿ, ಮಂಜುನಾಥ ಜಮಖಂಡಿ, ಹಿರೇಮಠ ಇನ್ನಿತರರು ಹಾಜರಿದ್ದರು.

ಅಲ್ಲಲ್ಲಿ ಆಚರಣೆ: ಬಸವ ಜಯಂತಿಯನ್ನು ಕುಂಬಾರ ಗಲ್ಲಿಯಬಸವೇಶ್ವರದೇವಸ್ಥಾನದಲ್ಲಿತೊಟ್ಟಿಲುಹಾಗೂ ನಾಮಕರಣ ಕಾರ್ಯಕ್ರಮ ಸುಮಂಗಲೆಯರಿಂದ ಜರುಗಿತು.ಅಲ್ಲಮಪ್ರಭುದೇವರದೇವಸ್ಥಾನದಲ್ಲಿರುವ ಬಸವೇಶ್ವರ ದೇವಸ್ಥಾನ, ಗೋಲಭಾವಿ ರಸ್ತೆ, ಸಸಾಲಟ್ಟಿ ರಸ್ತೆಯ ದೇವಸ್ಥಾನ ಸೇರಿದಂತೆ ಅಲ್ಲಲ್ಲಿ ಬಸವ ಜಯಂತಿಯನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.


# ಜಗಜ್ಯೋತಿ ಬಸವಣ್ಣ

ಅಣ್ಣಾ ನೀವು ಬಂದ ಮ್ಯಾಲ
ನಾವು ಮನುಷ್ಯರಾದೇವು ;
ಯಾರು? ನಾವು ಎಂದರಿಯದೆ ಒದ್ದಾಡುತ್ತಿದ್ದೇವು
ನಮಗೆ ಮಾನವಿತೇಯ ಧರ್ಮ ಬೋಧಿಸಿದ್ದೀರಿ;
ಆ ಕಾಲವೊಂದಿತ್ತು ಊರೊಳಗೆ
ಪ್ರವೇಶವಿಲ್ಲದಾ ಕಾಲ;
ಅಣ್ಣಾ ನೀವು ಬಂದ ಮ್ಯಾಲ
ಎಲ್ಲಾ ಬದಲಾಗ್ಯೆತಿ; ಜಗವೆಲ್ಲಾ ಬದಲಾಗ್ಯೆತಿ
ಉಸಿರ ಬಿಡಲು ಹೆದರುತ್ತಿದ್ದ
ಆ ಕಾಲವೊಂದಿತ್ತು ಆ ಕಾಲ ಈಗ ಇಲ್ಲ ಅಣ್ಣಾ;
ಸಹೋದರತೆ, ಮಮತೆ, ಕರುಣೆ,ಭ್ರಾತೃತ್ವ, ಸೌಹಾರ್ದತೆಯಿಂದ
ಮೆರೆಯುವ ಈ ಕಾಲ ನಮಗೆ ಸಂತಸ ತಂದಿದೆ.
ಊರಿನ ಜನ ಒಕ್ಕಟ್ಟಾಗಿ
ಜಾತ್ರೆ, ಹಬ್ಬ, ಕ್ರಿಸ್ಮಸ್, ಈದ್ ಮಿಲಾದ್, ಮಾಡೋದೆ
ಒಂದು ಅಂದ ಚಂದ ದೇವರ ತೇರು ಎಳೆಯೋದೆ
ಒಂದು ಅಂದ ಹರ ಹರ ಮಹಾದೇವ!
ಅಣ್ಣಾ ನೀವು ಹೋದ ಮ್ಯಾಲ
ಏನು? ಬದಲಾಗಲೇ ಇಲ್ಲಾ ! ಮತ್ತದೇ ಗೋಳು
ಬನ್ನಿ! ಅಣ್ಣಾ ನೀವು ಬರುತ್ತೀರಿ ಅಂತ
ನಾವು ಕಾಯ್ತಾ ಕುಂತೇವಿ ಬರ್ತೀರಿ ಅಲ್ಲಾ !
ಬರುತ್ತೀರಿ ಅಣ್ಣಾ ನೀವು ಬಂದೇ ಬರುತ್ತೀರಿ;
ಅಣ್ಣಾ ಆದ್ರ ಆವಾಗಿನಾಂಗ ನೀವು
ಕುದುರಿ ಮ್ಯಾಲ ಅಲ್ಲಾ; ಕೈಲಾಸ ಲೋಕದಿಂದ
ಸ್ವರ್ಣ ಪುಷ್ಪಗಳ ಚೆಲ್ಲುತ್ತಾ
ಸ್ವರ್ಣ ಪುಷ್ಪಗಳಿಂದ ಶೃಂಗಾರಗೊಂಡ
ವಿಮಾನದಾಗ ಬರುವಿರೀ
ವಿಶ್ವದ ಗುರು ನಮ್ಮನ್ನ ಬರುವರು ಅಂತಾ;
ನೀವು ಬರುವುದ ನೋಡಾಕ ಜಗವೆಲ್ಲಾ;
ಕಣ್ಣುಗಳು ತೆರೆದು ಬಣ್ಣ ಬಣ್ಣದ ಕಲ್ಪನೆಗಳನ್ನು
ಕಟ್ಟಿಕೊಂಡು ಅಣ್ಣಾ ಹೀಗೆ ಇರುವರು ಅಂತಾ ಕಲ್ಪಿಸುವರು ಜನಾ
ಅಪ್ಪ ರುದ್ರನ ಹೆಂಡತಿ ರುದ್ರಿಗೆ ಕಾಳಬದ್ರಿಗೆ ಹೇಳು
ಹಿಂದಿನ ಜನ್ಮದಿ ನನಗೆ ದೃಷ್ಟಿ ತಾಗಿತ್ತು.
ಲೋಕ ಕಲ್ಯಾಣದಲ್ಲಿ ತೊಡಕುಗಳು ಬಂದವು.
ಈಗ ಯಾವ ದೃಷ್ಟಿ ತಾಗದಂತೆ ನೀ ಇಟ್ಟುಕಳುಹಿಸು
ಒಂದು ದೃಷ್ಟಿ ಬೊಟ್ಟು
ಅಣ್ಣಾ ನೀವು ಭೂಮಿಗೆ ಇಳಿಯುವಾಗ
ಹನ್ನೆರಡು ಜ್ಯೋರ್ತಿ ಲಿಂಗ ಇರುವಲ್ಲಿ;
ದೀಪ ಹೊತ್ತುತ್ತಾವೆ ಗಂಟೆ ಮೊಳಗುತ್ತಾವೆ.
ದೀಪ ಧೂಪದ ಸುಗಂಧದ ಪರಿಮಳ ಸೂಸಲಿ ಬೀದಿಗೆಲ್ಲಾ
ಆಗಿನ ಕಾಲದಾಂಗ ಶಿವ ಶರಣರು
ಉಂಟು ಅಣ್ಣಯ್ಯಾ ಅವರು ತಮ್ಮ ಸಂದೇಶ
ಸಾರಲು ಬಹು ಪ್ರಯತ್ನ ಪಡುತಿಹರು ಲೋಕದ ಡೊಂಕ ತಿದ್ದಲು
ಅಣ್ಣನಂತೆ ಕ್ರಾಂತಿಕಾರಿಗಳು ಉಂಟು ಅಕ್ಕನಂತೆ ಸಾಧ್ವಿ
ಸೀರೋಮಣಿಗಳುಂಟಯ್ಯಾ
ವಿಶ್ವದ ಗುರು ಅಣ್ಣ ನಮ್ಮನ್ನ,
ಸಂದೇಶ ವಿಶ್ವಕ್ಕೆಲ್ಲಾ ತಲುಪಿಸಲು ಬರುವರು ,
ವಾಟ್ಸಾಪ್ ಫೇಸ್ ಬುಕ್ ಇನ್ಸ್ಟಾಗ್ರಾಂ ಟ್ವಿಟರ್ನಲ್ಲಿ
ಪೋಸ್ಟ್ ಮಾಡುವರು ; ಅಣ್ಣಾ ಅವರು ವಿಜ್ಞಾನ ತಂತ್ರಜ್ಞಾನ ತಿಳಿದು
ಬರುತಿರುವರಯ್ಯಾ ಸಂದೇಶ ಸಾರಲು
ಅಣ್ಣಾ ನೀವು ಬೇಗ ಜಗವೆಲ್ಲ ಕಾಯ್ದು ಕುತಿದೆ ಬನ್ನಿ;
ನಾವು ಸ್ವಾಗತಿಸಲು ; ಭೂಮಿಗೆ ಹೂವು ಮಾಲೆ ಕಟ್ಟಿ
ಜಗವೆಲ್ಲ ಶುದ್ಧ ಮಾಡಿ; ಕಾಯುತ್ತೀದ್ದೇವೆ
ನಿಮ್ಮ ಪಾದದಿಂದ ಭೂಲೋಕ ಪಾವನವಾಗಲಿ ನಮ್ಮ
ಉದ್ಧರಿಸಲು ಬನ್ನಿ! ಬರುವಿರಿ ನೀವು ಅಣ್ಣಾ ಒಂದೇ ಬರುವಿರಿ.



– ಶ್ರೀಮತಿ ಸಕ್ಕುಬಾಯಿ ಮುಗಳಖೋಡ
ಸಹ ಶಿಕ್ಷಕಿ :ಸೈದಾಪುರ

# ಐತಿಹಾಸಿಕ ಮಹಾತ್ಮ ಬಸವಣ್ಣ



ಬಸವಣ್ಣ ಪುರಾಣ ಪುರುಷನಲ್ಲ, ಪವಾಡ ಪುರುಷನಲ್ಲ, ಉದ್ಭವ ಮೂರ್ತಿಯಲ್ಲ. ಅವರು ಐತಿಹಾಸಿಕ ಮಹಾತ್ಮ. ಮೌಲ್ಯಗಳ ಮೊತ್ತ, ತತ್ವಗಳ ತೇಜ, ಆದರ್ಶಗಳ ಆಗರ, ಅರಿವಿನ ಓಗರ, ಆಚಾರದ ಅರಸ, ಅನುಭಾವದ ಶಿಖರವಾಗಿದ್ದಾರೆ. ಬಸವಣ್ಣನವರು ದಕ್ಷ ಆಡಳಿತಗಾರ, ಅರ್ಥಶಾಸ್ತ್ರಜ್ಞ, ರಾಜನೀತಿಜ್ಞ, ನೈತಿಕ ತಜ್ಞರಾಗಿದ್ದಾರೆ. ಅವರು ಶರಣ ಪಡೆಯ ಶ್ರೇಷ್ಠ ಸಂಘಟನಾಕಾರ, ಅನುಭವ ಮಂಟಪವೆಂಬ ಧಾರ್ಮಿಕ ಸಂಸತ್ತಿನ ಶಿಲ್ಪಿ, ತಾತ್ವಿಕ ತಳಹದಿಯ ಮೇಲೆ ಸಾತ್ವಿಕ ಸಮಾಜ ಕಟ್ಟಿದ ಸಮಾಜ ಶಿಲ್ಪಿ, ದೈವತ್ವದೆಡೆಗಿನ ಶಬ್ದಸೋಪಾನ ಕಟ್ಟಿದ ವಚನಶಿಲ್ಪಿ ಎನಿಸಿದ್ದಾರೆ. ಸಮಾನತೆಯ ಹರಿಕಾರ, ಸಮನ್ವಯತೆಯ ಸಾಧಕ, ಭಕ್ತಿ ಭಾಂಡಾರಿ, ಕಾಯಕಯೋಗಿ,ಮಹಾದಾಸೋಹಿಯಾದ ಬಸವಣ್ಣನವರು ಸತ್ಯಶೋಧಕ, ಶ್ರೇಷ್ಠ ತತ್ವಜ್ಞಾನಿ, ಮಹಾದಾರ್ಶನಿಕ, ಸಕಾರಾತ್ಮಕ ವಿಚಾರವಾದಿ, ವೈಜ್ಞಾನಿಕ ಮನೋಭಾವಿ ಮತ್ತು ವೈಚಾರಿಕ ಚಿಂತಕರಾಗಿದ್ದಾರೆ. ನಿರಂಜನ, ನಿಜಶರಣ, ನಿಜೈಕ್ಯ, ಕಿಂಕರತ್ವದ ಪ್ರತಿಪಾದಕ,ಶಂಕರತ್ವದ ಪ್ರತೀಕವಾದ ಮಹಾಮಹಿಮ ಬಸವಣ್ಣನವರದು ಉಪಮೆ, ಕಲ್ಪನೆ, ಪದಗಳಿಗೆ ನಿಲುಕದ ನಿಲುವಾಗಿದೆ.

ಒಬ್ಬಪ್ರತಿಷ್ಠಿತವ್ಯಕ್ತಿಯಾಗಿಬದುಕುವಎಲ್ಲಅವಕಾಶಗಳು ಅವರಿಗಿದ್ದರೂ ಅವರು ಸಮಾನತೆಯ ಹೋರಾಟದ ಹಾದಿಯನ್ನುಆರಿಸಿಕೊಂಡರು. ಜಾತಿ,ವರ್ಣ,ವರ್ಗ, ಲಿಂಗ ಭೇಧಗಳನ್ನು ತೊಡೆದು ಹಾಕಿ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಅಡಿಪಾಯದ ಮೇಲೆ ಆದರ್ಶ ಸಮಾಜ ಕಟ್ಟಬೇಕೆಂಬ ಕನಸಿನೊಂದಿಗೆ ಕಾರ್ಯರಂಗಕ್ಕೆ ಇಳಿದರು. ಮೇಲ್ವರ್ಗದವರು ಇದನ್ನು ವಿರೋಧಿಸಿದರು. ಆದರೆ, ಬಸವಣ್ಣನವರು ಹಿಂಜರಿಯಲಿಲ್ಲ. ಅಬಲರನ್ನು ಮೇಲಕ್ಕೆತ್ತಲು ಮಂತ್ರಿ ಪದವಿಯಿಂದ ಕೆಳಗಿಳಿದು ಬಂದರು. ಪರಹಿತಕ್ಕೆ ಸ್ವಹಿತವನ್ನು ತೊರೆದರು. ಪ್ರಜೆಗಳಿಗಾಗಿ ಪ್ರಭುತ್ವವನ್ನು ಎದುರು ಹಾಕಿಕೊಂಡರು.

ಬಸವಣ್ಣನವರು ಕಲ್ಯಾಣದಲ್ಲಿ ಸ್ಥಾಪಿಸಿದ 'ಅನುಭವ ಮಂಟಪ'ಕ್ಕೆ ದೇಶದ ನಾನಾ ಭಾಗಗಳಿಂದ ಶರಣರು ಆಗಮಿಸಿದರು. ಕಾಶ್ಮೀರದ ದೊರೆ ಮಹಾದೇವ ಭೂಪಾಲ, ರಾಜಕುಮಾರಿ ಬೊಂತಾದೇವಿ, ಅಪಘಾನಿಸ್ತಾನದ ಮರುಳಶಂಕರ ದೇವರು, ಆಂಧ್ರಪ್ರದೇಶದ ಕಿನ್ನರಿ ಬೊಮ್ಮಯ್ಯ, ಗುಜರಾತಿನ ಆದಯ್ಯ, ತಮಿಳುನಾಡಿನ ಮಾದಾರ ಚೆನ್ನಯ್ಯ ಮುಂತಾದ ಶರಣರು ಕಲ್ಯಾಣಕ್ಕೆ ಆಗಮಿಸಿದರು. ಅಲ್ಲಿ ಎಲ್ಲರಿಗೂ ಮುಕ್ತಪ್ರವೇಶ ಮತ್ತು ಮುಕ್ತ ಅವಕಾಶವಿತ್ತು. ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು. ಅಡುಗೆ ಮನೆಗೆ ಸೀಮಿತವಾಗಿದ್ದ ಮಹಿಳೆಯರು ಅನುಭವ ಮಂಟಪಕ್ಕೆ ಬಂದಿದ್ದರು. ಕಸಗೂಡಿಸುವ ಕಾಯಕದ ಸತ್ಯಕ್ಕ ವಚನ ರಚನೆಯ ಮಟ್ಟಕ್ಕೇರಿದಳು. ಬಸವಣ್ಣನವರು ಸ್ತ್ರೀ ಸ್ವಾತಂತ್ರ್ಯ ತಂದುಕೊಟ್ಟ ಮಹಾಕಾರಣಿಕ. ಜಗತ್ತಿನಲ್ಲಿ ಹೆಣ್ಣು, ಹೊನ್ನು, ಮಣ್ಣು, ಅಧಿಕಾರಕ್ಕಾಗಿ ರಕ್ತ ಕ್ರಾಂತಿಗಳೇ ನಡೆದಿವೆ. ಆದರೆ, ಶರಣರದು ಸಮಾನತೆಗಾಗಿ ನಡೆದ ವೈಚಾರಿಕ ಕ್ರಾಂತಿಯಾಗಿದೆ. ಒಂದೇ ಕುಟುಂಬದ ಬಸವಣ್ಣ, ನೀಲಾಂಬಿಕೆ, ಗಂಗಾಬಿಕೆ, ಅಕ್ಕನಾಗಲಾಂಬಿಕೆ, ಚೆನ್ನಬಸವಣ್ಣನವರು ವಚನ ಚಳವಳಿಯಲ್ಲಿ ಭಾಗವಹಿಸಿದ್ದು ವಿಶೇಷವಾಗಿದೆ.

ಬಸವಣ್ಣನವರು ವೇದಕ್ಕೆ ಒರೆ ಹಚ್ಚಿದರು. ಜಿಡ್ಡುಗಟ್ಟಿದ ಸಮಾಜೋ–ಧಾರ್ಮಿಕ ವ್ಯವಸ್ಥೆಯನ್ನು ಪ್ರಶ್ನಿಸಿ, ಪರೀಕ್ಷಿಸಿ, ವಿಶ್ಲೇಷಿಸಿ ವೈಚಾರಿಕ ಸ್ಪರ್ಶ ನೀಡಿ ವಚನಗಳ ಮೂಲಕ ವಿಶ್ವ ಸತ್ಯವನ್ನು ಬೋಧಿಸಿದರು. ಪುರೋಹಿತರು ಜನಸಾಮಾನ್ಯರಿಗೆ ದೇವಾಲಯ ಪ್ರವೇಶವನ್ನು ಬಹಿಷ್ಕರಿಸಿದರೆ ಬಸವಣ್ಣನವರು ದೇಹವೇ ದೇವಾಲಯವೆಂದು ದೇವಾಲಯ ಸಂಪ್ರದಾಯವನ್ನೇ ನಿರಾಕರಿಸಿದರು. 'ಪಶುಪತಿ ನೀನು ಜಗಕ್ಕೇಕೋದೇವ' ಎಂದು ಹಲವು ದೇವರುಗಳ ಹಾವಳಿ ತಪ್ಪಿಸಿದರು. ಇಷ್ಟಲಿಂಗದ ಮೂಲಕ ಅನಂತತೆಯನ್ನು ಅಂಗೈಗೆ ತಂದುಕೊಟ್ಟು ದೇವ ಮತ್ತು ಭಕ್ತರ ನಡುವಿನ ದಲ್ಲಾಳಿಗಳನ್ನು ದೂರೀಕರಿಸಿದರು. 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಸಾಂಪ್ರದಾಯಿಕ ಸ್ವರ್ಗ, ನರಕಗಳನ್ನು ಅತಿಗಳೆದು ವೈಚಾರಿಕ ನೆಲೆಗಟ್ಟಿನ ಸ್ವರ್ಗ, ನರಕಗಳನ್ನು ಪ್ರತಿಪಾದಿಸಿದರು. ದಯವೇ ಧರ್ಮದ ಮೂಲವೆಂದು ಧರ್ಮವನ್ನು ದಯಾಪರಗೊಳಿಸಿದರು.

'ಮಹಾಮಹಿಮ ಸಂಗನಬಸವಣ್ಣನು ಎನಗೆಯೂ ಗುರು, ನಿನಗೆಯೂ ಗುರು, ಜಕಕ್ಕೆಲ್ಲ ಗುರು ಕಾಣಾ ಗುಹೇಶ್ವರಾ' ಎಂಬ ಅಲ್ಲಮರ ವಚನ ಅಕ್ಷರಶಃ ಸತ್ಯವಾಗಿದೆ. 'ಬಸವಣ್ಣನಿಂದ ಬದುಕಿತೀಲೋಕ' ಎಂಬ ಬಹುರೂಪಿ ಚೌಡಯ್ಯನವರ ವಾಣಿಯಂತೆ ಬಸವಣ್ಣನವರ ವಿಚಾರಧಾರೆಗಳು ಇಂದು ಕಡಲಾಚೆಗೂ ಮನ್ನಣೆ ಪಡೆದಿವೆ. ಬಸವಣ್ಣ ಯುಗಯುಗದ ಉತ್ಸಾಹ. ಬಸವ ಸಾಹಿತ್ಯ ಬತ್ತದ ನಿತ್ಯ ನವೋಲ್ಲಾಸವನ್ನು ನೀಡುವ ಜ್ಞಾನ ಸಾಗರವಾಗಿ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

–ಪ್ರೊ.ಬಸವರಾಜ ಕಡ್ಡಿ, ಜಮಖಂಡಿ.
ಮೊ.9449713204

# ಜಗತ್ತಿನ ಶ್ರೇಷ್ಠ ದಾರ್ಶನಿಕ ಬಸವಣ್ಣನವರು ಕನ್ನಡಿಗರೆಂಬುದು ಹೆಮ್ಮೆ



**ರಬಕವಿ :** ಹನ್ನೆರಡನೆಯ ಶತಮಾನದ ಮಹಾನ್ ಮಾನವತಾವಾದಿ, ಜಗತ್ತಿನ ಶ್ರೇಷ್ಠ ದಾರ್ಶನಿಕ ಬಸವಣ್ಣನವರು ಕನ್ನಡ ನಾಡಿನವರು ಎಂದು ಹೇಳಲು ನಾವು ಹೆಮ್ಮೆ ಪಡಬೇಕು. ಅವರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯಗಳನ್ನು ಮಾಡಿದರು. ಇಂದಿನ ಯುವ ಜನಾಂಗಕ್ಕೆ ಬಸವೇಶ್ವರ ಮತ್ತು ಶರಣರ ವಚನಗಳನ್ನು ಕಲಿಸುವುದು ಮತ್ತು ಅವುಗಳ ಮಹತ್ವದ ಬಗ್ಗೆ ತಿಳಿ ಹೇಳಬೇಕು ಎಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ನುಡಿದರು.

ಅವರುಬುಧವಾರಇಲ್ಲಿನಹೊಸಬಸ್‌ನಿಲ್ದಾಣದಹತ್ತಿರ ಬಸವ ಜಯಂತ್ಯೋತ್ಸವದ ಅಂಗವಾಗಿ ಹಮ್ಮಿಕೊಂಡ ಬಸವೇಶ್ವರರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ಶಾಸಕ ಸಿದ್ದು ಸವದಿ, ಹನ್ನೆರಡನೆಯ ಶತಮಾನದಲ್ಲಿ ಎಲ್ಲ ಜಾತಿ ಜನಾಂಗದವರಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯನ್ನು ನೀಡಿದ ಬಸವೇಶ್ವರರ ಆಚರಣೆ ಮಾಡಿದರೆ ಇನ್ನಷ್ಟು ಮಹತ್ವ ಬರುತ್ತದೆ. ಬಸವೇಶ್ವರರ ಕಾಯಕ, ಪ್ರಸಾದ ಮತ್ತು ದಾಸೋಹ ಇಂದಿನ ದಿನಗಳಲ್ಲಿ ಹೆಚ್ಚು ಪ್ರಸ್ತುತವಾಗಿವೆ ಎಂದು ತಿಳಿಸಿದರು.

ನಗರದ ಹೊಸ ಬಸ್ ನಿಲ್ದಾಣದಿಂದ ಆರಂಭಗೊಂಡ ಮೆರವಣಿಗೆ ವಿರಕ್ತಮಠದವರೆಗೆ ಸಕಲವಾದ್ಯ ಮೇಳದೊಂದಿಗೆ ನಡೆಯಿತು.

ಚಿದಾನಂದ ಸೊಲ್ಲಾಪುರ, ಈರಣ್ಣ ಗುಣಕಿ, ಮಹಾದೇವ ದೂಪದಾಳ, ನೀಲಕಂಠ ಮುತ್ತೂರ, ಬಸವರಾಜ ತೆಗ್ಗಿ, ಮಹಾದೇವ ಕೋಟ್ಯಾಳ, ಗುರುಪಾದಯ್ಯ ಅಮ್ಮಣಗಿಮಠ, ಪ್ರಭು ಉಮದಿ, ಮಲ್ಲಿಕಾರ್ಜುನ ಗಡೆನ್ನವರ, ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ, ಪ್ರಭು ಪೂಜಾರಿ, ಸಂಜಯ ತೆಗ್ಗಿ, ಪ್ರಶಾಂತ ಪಾಲಭಾಂವಿ, ಬಾಬು ಮಾಹಾಜನ, ಮಲಪ್ಪ ಕುಚನೂರ, ರವಿ ಗಡಾದ, ರಾಮಣ್ಣ ಹುಲಕುಂದ, ಸುಭಾಷ ಮದರಖಂಡಿ, ಸಿದ್ದು ಅರಬಳ್ಳಿ, ಬಸು ಅಮ್ಮಣಗಿಮಠ, ಸಂಜು ತೇಲಿ, ಆನಂದ ಜುಗಳಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಸಮಾನತೆಯ ಹರಿಕಾರ ಬಸವೇಶ್ವರರು



**ರಬಕವಿ–ಬನಹಟ್ಟಿ :** ಅನುಭವ ಮಂಟಪದ ಮೂಲಕ ಮಹಿಳೆಯರಿಗೂ ಸೇರಿದಂತೆ ಪ್ರತಿಯೊಬ್ಬರಿಗೂ ಸಮಾನತೆಯನ್ನು ನೀಡಿದ ಬಸವಣ್ಣ ಸಮಾನತೆಯ ಹರಿಕಾರರಾಗಿದ್ದಾರೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಬುಧವಾರ ರಬಕವಿ–ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಬಸವೇಶ್ವರರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದರು. ಮಾನವ ಹಕ್ಕುಗಳನ್ನು ಪ್ರತಿಪಾದನೆ ಮಾಡುವುದರ ಜೊತೆಗೆ ಅವುಗಳನ್ನು ಕಾರ್ಯ ರೂಪಕ್ಕೆ ತಂದ ಮೊದಲ ವ್ಯಕ್ತಿ ಬಸವಣ್ಣ.

ಬಸವಣ್ಣನವರ ವಚನಗಳನ್ನು ಗಮನಿಸಿದಾಗ ಅದರಲ್ಲಿ ಮಾನವ ಹಕ್ಕುಗಳ ಬಹಳಷ್ಟು ಅಂಶಗಳು ಒಳಗೊಂಡಿವೆ ಎಂದು ಸವದಿ ತಿಳಿಸಿದರು.

ತೇರದಾಳ ತಹಶೀಲ್ದಾರ್ ವಿಜಯಕುಮಾರ ಕಡಕೋಳ, ಮಹಾಂತ ದೇವರು, ಶಿರಸ್ತೆದಾರ ರಾಜಶೇಖರ ಸಾತಿಹಾಳ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ, ಈರಣ್ಣ ಬಾಣಕಾರ, ವಿಠ್ಠಲ ಕಾಂಬಳೆ, ರಮೇಶ ಮಂಡಿ, ಗುರುಬಸಪ್ಪ ಚನಾಳ, ಶ್ರೀಶೈಲ ಮಡಿವಾಳರ, ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ, ರಾಮಣ್ಣ ಹುಲಕುಂದ, ವಿಜಯಕುಮಾರ ಹಲಕುರ್ಕಿ, ಗಜಾನನ ತೆಗ್ಗಿ, ಶ್ರೀಶೈಲ ಬೀಳಗಿ, ಲಕ್ಕಪ್ಪ ಪಾಟೀಲ, ಮಹೇಶ ಬಂಡಿಗಣಿ, ಶ್ರೀಶೈಲ ಗಸ್ತಿ, ರವಿ ಗೆದ್ದೆಪ್ಪನವರ, ಸಂಜಯ ತೆಗ್ಗಿ, ಶಂಕರ ಹೋಳಗಿ, ಆಕಾಶ ಮುಂಡಗನೂರ, ಶಿವಲಿಂಗಪ್ಪ ಕರಲಟ್ಟಿ, ಚಂದ್ರಶೇಖರ ಹುಲಗಬಾಳಿ, ಬಸವರಾಜ ಚನಾಳ, ಶಿವಾನಂದ ಬರಗಲ್ಲ, ಲಕ್ಷ್ಮೀ ಐವಳ್ಳಿ, ರಾಜು ಸಾರವಾಡ, ಈರಣ್ಣ ಶಿರಹಟ್ಟಿ, ಗಿರೀಶ ಮುತ್ತೂರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಪ್ರಾಚ್ಯವಸ್ತು ಸ್ಥಳಗಳನ್ನು ನಾವು ಗೌರವಿಸಬೇಕಿದೆ- ಸಚಿವ ಎಚ್.ಕೆ.ಪಾಟೀಲ್



**ಕೊಪ್ಪಳ :** ಕೇವಲ ಹಂಪಿ ಉತ್ಸವ ಮಾಡಿದರೆ ಸಾಲದು ನಮ್ಮ ಇತಿಹಾಸ ಮತ್ತು ಪರಂಪರೆಯನ್ನು ತಿಳಿಸುವ ಪ್ರಾಚ್ಯವಸ್ತುಗಳನ್ನು ನಾವು ಗೌರವಿಸುವುದರ ಜೊತೆಗೆ ಅವುಗಳನ್ನು ಸಂರಕ್ಷಿಸಬೇಕಿದೆ ಎಂದು ಕಾನೂನು. ನ್ಯಾಯ. ಮಾನವ ಹಕ್ಕುಗಳು. ಸಂಸದೀಯ ವ್ಯವಹಾರ. ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ.ಪಾಟೀಲ್ ಹೇಳಿದರು.

ಕಳೆದ ಎರಡು ಮೂರು ದಿನಗಳ ಹಿಂದೆ ಶ್ರೀಕೃಷ್ಣದೇವರಾಯ ಸಮಾಧಿ ಸ್ಥಳದಲ್ಲಿ ಮಾಂಸ ಕತ್ತರಿಸಿ ಮಾರಾಟ ಮಾಡಲಾಗುತ್ತಿದೆ ಎಂಬ ವರದಿ ಮಾಧ್ಯಮಗಳಲ್ಲಿ ಬಂದ ಹಿನ್ನೆಲೆಯಲ್ಲಿ ಮಂಗಳವಾರ ಆನೆಗುಂದಿಯಲ್ಲಿರುವ ಕೃಷ್ಣದೇವರಾಯ ಸಮಾಧಿ ಸ್ಥಳಕ್ಕೆ ಭೇಟಿ ನೀಡಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಕೃಷ್ಣದೇವರಾಯ ಸಮಾದಿ 64 ಕಂಬಗಳಿಂದ ಕೂಡಿದ ಐತಿಹಾಸಿಕ ಸ್ಥಳ ಇದರ ಬಗ್ಗೆ ನಮಗೆಲ್ಲರಿಗೂ ಅಭಿಮಾನ ಹಾಗೂಗೌರವದಸಂಗತಿಇಂತಹಸ್ಥಳದಲ್ಲಿಮಾಂಸಮಾರಾಟ ನಡೆದಿದೆ ಎಂದರೆ ನೋವಿನ ಸಂಗತಿಯಾಗಿದೆ. ಇಲ್ಲಿಯ ಜನರು ಹೇಳುವ ಪ್ರಕಾರ ಇದು ಆಕಸ್ಮಿಕವಾಗಿ ನಡೆದ ಘಟನೆ ಎಂದು. ಆದರೆ ಇದನ್ನು ಲಘುವಾಗಿ ತಿಳಿದುಕೊಳ್ಳುವಂತಿಲ್ಲ. ಗಂಭೀರವಾಗಿ ತೆಗೆದುಕೊಳ್ಳಲಾಗುವುದು. ಈಗಾಗಲೇ ಆನೆಗುಂದಿಯ 3 ಜನರ ಮೇಲೆ ಎಫ್.ಐ.ಆರ್ ಮಾಡಲಾಗಿದೆ. ಕನ್ನಡಿಗರಾದ ನಾವು ನಮ್ಮ ತನವನ್ನು ಗೌರವಿಸುವುದರ ಜೊತೆಗೆ ಪ್ರಾಚ್ಯವಸ್ತು ಅವಶೇಷಗಳನ್ನು ಕಾಪಾಡಲು ಪ್ರತಿಯೊಬ್ಬರು ಕೈಜೋಡಿಸಬೇಕಿದೆ. ಈ ಪರಿಸರದ ಸುತ್ತಲೂ ಸೌಂದರ್ಯ ಹೆಚ್ಚಿಸುವ ಕೆಲಸ ಈ ವರ್ಷದಿಂದಲೇ ಮಾಡಲಾಗುವುದು. ಕೃಷ್ಣದೇವರಾಯ ಸಮಾದಿ 64 ಕಂಬಗಳ ಸಣ್ಣಪುಟ್ಟ ರಿಪೇರಿ ಅವಶ್ಯಕತೆ ಇದೆ ಅದನ್ನು ಸರಿಪಡಿಸಲಾಗುವುದು. ನಮ್ಮ ಐತಿಹಾಸಿಕ ಸ್ಥಳಗಳ ಸಂರಕ್ಷಣೆ ಜವಾಬ್ದಾರಿ ಎಲ್ಲಾರ ಮೇಲಿದ್ದು ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ ಎಂದು ಹೇಳಿದರು.

ಆನೆಗುಂದಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಹುಲಿಗೆಮ್ಮ ಮಾತನಾಡಿ ಕೃಷ್ಣದೇವರಾಯ ಸಮಾಧಿಯ ಮೇಲೆ ಮಾಂಸ ಕತ್ತರಿಸಿ ಮಾರಾಟ ಮಾಡಿರುವುದು ಆಕಸ್ಮಿಕವಾಗಿ ನಡೆದ ಘಟನೆಯಾಗಿದ್ದು ಇಂತಹ ಘಟನೆ ಮರು ಕಳಿಸದಂತೆ ನೋಡಿಕೊಳ್ಳಲಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಅರಸ ಶ್ರೀ ಕೃಷ್ಣದೇವರಾಯ ನಮ್ಮ ಭಾಗದ ಹೆಮ್ಮೆಯ ಅರಸನಾಗಿದ್ದ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ. ವಿಜಯನಗರ ಸಾಮ್ರಾಜ್ಯದ ವಂಶಸ್ಥರಾದಲಲಿತಾರಾಣಿಹಾಗೂಶ್ರೀಕೃಷ್ಣದೇವರಾಯಲು. ರಾಜ್ಯ ಪುರಾತತ್ವ ಇಲಾಖೆಯ ಉಪನಿರ್ದೇಶಕರಾದ ಡಾ. ಆರ್. ಶಿಜೇಶ್ವರ್. ಸಹಾಯಕ ಆಯುಕ್ತರಾದ ಕ್ಯಾ. ಮಹೇಶ್ ಮಾಲಗಿತ್ತಿ. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ. ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿದ್ದರು.

# 48 ಲಕ್ಷ ರೂಗಳ ಉಳಿತಾಯ ಬಜೆಟ್ ಮಂಡನೆ ಕೊಪ್ಪಳದ ಕೆರೆ ಅಭಿವೃದ್ಧಿ ಗೆ ವಿಶೇಷ ಆದ್ಯತೆ-ನಗರಸಭಾಧ್ಯಕ್ಷ ಪಟೇಲ್ ಘೋಷಣೆ



**ಕೊಪ್ಪಳ :** ಕೊಪ್ಪಳ ನಗರಸಭೆಯ ಪ್ರಸಕ್ತ ಸಾಲಿನ ಬಜೆಟ್ ಮಂಡನೆ ಸಭೆ ಮಂಗಳವಾರ ಬೆಳಿಗ್ಗೆ ಕಚೇರಿಯ ಸಭಾಭವನದಲ್ಲಿ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರ ಅಧ್ಯಕ್ಷತೆಯಲ್ಲಿ ಜರುಗಿದ್ದು 48 ಲಕ್ಷ ರೂ ಗಳ ಉಳಿತಾಯ ಬಜೆಟ್ ಮಂಡನೆಯನ್ನು ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರು ಮಂಡನೆ ಮಾಡಿದರು,

ನಗರಸಭೆಗೆ ವಿವಿಧ ಯೋಜನೆಗಳಿಂದ ಹಾಗೂ ಸಾರ್ವಜನಿಕರ ಕರ ಪಾವತಿಯಿಂದ ಒಟ್ಟು 54, 43, 61, 278 ಗುರುಗಳನ್ನು ಅಂದಾಜು ಜಮಾವಾಗಲಿದೆ, ಅದರಲ್ಲಿ 53, 95, 13, 778 ರೂಗಳನ್ನು ಅಂದಾಜು ಖರ್ಚು ಮಾಡಲಾಗುವುದು ಸುಮಾರು 48, 47,500, ಲಕ್ಷ ರೂಗಳನ್ನು ಉಳಿತಾಯ ಮಾಡಬಹುದೆಂದು ಉಳಿತಾಯ ಬಜೆಟನ್ನು ಅವರು ಮಂಡಿಸಿದರು.

ನಗರದ ಹುಲಿಕೇರೆ ಸೇರಿದಂತೆ ವಿವಿಧ ಕೆರೆ ಅಭಿವೃದ್ಧಿ ಪಡಿಸುವದು ನನ್ನ ಗುರಿಯಾಗಿದ್ದು ಅದಕ್ಕೆ ತಕ್ಕಂತೆ ವಿಶೇಷ ಆದ್ಯತೆ ನೀಡಿ ಕೆರೆಗಳ ಅಭಿವೃದ್ಧಿ ಪಡಿಸಲಾಗುವುದು ಇದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳುವುದಿಲ್ಲ ಶಾಶ್ವತವಾಗಿ ಪರಿಹಾರ ಕಂಡುಕೊಳ್ಳುವಂತಾಗುತ್ತದೆ ಎಂದು ವಿವರಿಸಿದರು ಅಲ್ಲದೆ ನಗರದಲ್ಲಿ ರಸ್ತೆ ಉಪ ರಸ್ತೆಗಳ ದುರಸ್ತಿಯ ಅಭಿವೃದ್ಧಿ ಸೇರಿದಂತೆ ಚರಂಡಿಗಳ ನಿರ್ಮಾಣ ,ವಿದ್ಯುತ್ ಸಮರ್ಪಕವಾಗಿ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ವಿಶೇಷ ಆದ್ಯತೆ ಮೇರೆಗೆ ಜನಪರ ಕಾರ್ಯಕ್ರಮಗಳನ್ನು ಸಹ ಮಾಡಲಾಗುವುದು ಜನರ ಸಮಸ್ಯೆಗಳಿಗೆ ನೇರ ಸ್ಪಂದನೆ ನೀಡಿ ಅದರ ಇತ್ಯಾರ್ಥಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರು ಬಜೆಟ್ ಮಂಡನೆ ಸಭೆಯಲ್ಲಿ ವಿವರಿಸಿದರು ನಂತರ ಸದಸ್ಯರಿಂದ ಸುದೀರ್ಘವಾಗಿ ಚರ್ಚೆ ಗಳನ್ನು ನಡೆದು ನಂತರ ಬಜೆಟ್ ಮಂಡನೆಗೆ ಎಲ್ಲರೂ ಅನುಮೋದನೆ ನೀಡಿದರು.

ವೇದಿಕೆಮೇಲೆಕೊಪ್ಪಳನಗರಸಭೆಯಉಪಾಧ್ಯಕ್ಷರಾದ ಅಶ್ವಿನಿ ಗದುಗಿನಮಠ ,ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಕ್ಬರ್ ಪಾಷಾ ಪಲ್ಟನ್, ಪೌರಾಯುಕ್ತಾರಾದ ಗಣಪತಿ ಪಾಟೀಲ್, ಉಪಸ್ಥಿತರಿತು ಸಭೆಯಲ್ಲಿ ನಗರಸಭೆಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯರಾದ ಮಹೇಂದ್ರ ಚೋಪ್ರಾ, ಸದಸ್ಯರಾದ ಮುತ್ತುರಾಜ್ ಕುಷ್ಟಗಿ, ಮಲ್ಲಪ್ಪ ಕವ್ಲೂರು,ಅನೇಕ ಸದಸ್ಯರು ಸೇರಿದಂತೆ ನಗರಸಭೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು,

# ರತ್ನ ಮತ್ತು ಆಭರಣ ಉದ್ಯಮದ ಅತ್ಯುತ್ತಮ ಮಹಿಳಾ ಉದ್ಯಮಿಗಳಿಗೆ ಐಬಿಜೆಎ ಗೋಲ್ಡನ್ ಗರ್ಲ್ಸ್ ಪ್ರಶಸ್ತಿ ಪ್ರಧಾನ

**ಬೆಂಗಳೂರು :** ವಿಶ್ವ ಆಭರಣ ಕ್ಷೇತ್ರದಲ್ಲಿ ಬೆಂಗಳೂರು ನಗರದ ಹೆಸರನ್ನು ಉಜ್ವಲಗೊಳಿಸುವ ನಿಟ್ಟಿನಲ್ಲಿ ರತ್ನ ಮತ್ತು ಆಭರಣಉದ್ಯಮದಲ್ಲಿತೊಡಗಿಕೊಂಡಿರುವ ಮಹಿಳಾ ಉದ್ಯಮಿಗಳ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ಬಿಡಿಎ ಅಧ್ಯಕ್ಷರಾದ ಎನ್ ಎ ಹ್ಯಾರಿಸ್ ಅಭಿಪ್ರಾಯಪಟ್ಟರು.

ಇಂದು ನಗರದ ಖಾಸಗಿ ಹೋಟೇಲ್ ನಲ್ಲಿ ಹೀರಾ ಜವೇರಾತ್ ಟ್ರೇಡ್ ಮೀಡಿಯಾ ಗ್ರೂಪ್ ಎಂಟರ್‌ಪ್ರೈಸಸ್ ಸಹಯೋಗದೊಂದಿಗೆ ಐಬಿಜೆಎಯ ಆಭರಣ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ಡಾ. ಚೇತನ್ ಕುಮಾರ್ ಮೆಹ್ತಾ ನೇತೃತ್ವದಲ್ಲಿ ಆಯೋಜಿಸಲಾಗಿದ್ದ 3 ನೇ ಆವೃತ್ತಿಯ ಐಬಿಜೆಎ ಗೋಲ್ಡನ್ ಗರ್ಲ್ಸ್ ಪ್ರಶಸ್ತಿ ನೀಡಿ ಗೌರವಿಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಅದರಲ್ಲೂ ಬೆಂಗಳೂರು ನಗರ ವಿಶ್ವ ರತ್ನ ಮತ್ತು ಆಭರಣ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಇದಕ್ಕೆ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಮಹಿಳಾ ಉದ್ಯಮಿಗಳ ಪಾತ್ರ ಹಿರಿದಾಗಿದೆ. ಇಂತಹ ಉದ್ಯಮಿಗಳನ್ನು ಗುರುತಿಸಿ ಗೌರವಿಸುವ ಕಾರ್ಯ ಬಹಳ ಶ್ಲಾಘನೀಯ ಎಂದರು.

ಐಬಿಜೆಎಯ ಆಭರಣ ವಿಭಾಗದ




*ರಾಷ್ಟ್ರೀಯ ಅಧ್ಯಕ್ಷ ಡಾ. ಚೇತನ್ ಕುಮಾರ್ ಮೆಹ್ತಾ ಮಾತನಾಡಿ, ಮಹಿಳೆಯರನ್ನು ಬಲಶಾಲಿಗಳನ್ನಾಗಿ ಮಾಡುವುದು ಈಗಿನ ಸ್ತ್ರೀವಾದವಲ್ಲ. ಮಹಿಳೆಯರು ಈಗಾಗಲೇ ಶಕ್ತಿಶಾಲಿಗಳಾಗಿದ್ದಾರೆ. ರತ್ನ ಮತ್ತು ಆಭರಣ ಉದ್ಯಮವು ಪ್ರಮುಖ ಮಹಿಳಾ ಉದ್ಯಮಿಗಳೊಂದಿಗೆ ಮಿಂಚುತ್ತಿದೆ. ವ್ಯಾಪಾರ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ನಮ್ಮನ್ನು ಮುನ್ನಡೆಸಿ,ಉದ್ಯಮದಬೆನ್ನೆಲುಬಾಗಿದ್ದಾರೆ. ಆಭರಣ ವಿನ್ಯಾಸ ಮತ್ತು ಉತ್ಪಾದನೆಯ ಪ್ರತಿಯೊಂದು ಅಂಶಕ್ಕೂ ಕೊಡುಗೆ ನೀಡುತ್ತಿದ್ದಾರೆ. ಈ ಪ್ರಶಸ್ತಿಗಳು ಅಚಲ ಉತ್ಸಾಹದಿಂದ ಹಲವಾರು ಸವಾಲುಗಳನ್ನು ಜಯಿಸಿ, ಯಶಸ್ಸನ್ನು ಸಾಧಿಸಿದ ಮತ್ತು ಶ್ರೇಷ್ಠತೆಯ ಹೊಸ ಮಾನದಂಡಗಳನ್ನು ಸ್ಥಾಪಿಸಿದ ಉದ್ಯಮಿಗಳನ್ನು ಗೌರವಿಸಿದ್ದೇವೆ ಎಂದು ಹೇಳಿದರು.

ಐಬಿಜೆಎ ರಾಷ್ಟ್ರೀಯ ಅಧ್ಯಕ್ಷ ಪೃಥ್ವಿರಾಜ್ ಕೊಠಾರಿ ಮಾತನಾಡಿ , ಬೆಂಗಳೂರಿನಲ್ಲಿ ಆಯೋಜಿಸಲಾದ ಈ ವರ್ಷದ ಆವೃತ್ತಿಯು ವ್ಯಾಪಾರದಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸಲು ಮತ್ತು ಅವರ ನಾಯಕತ್ವವನ್ನು ಗುರುತಿಸಲು ನಮ್ಮ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಜಿಜಿಎ ಸಂಚಾಲಕಿ ಮತ್ತು ಬಜಾಜ್ ಓವರ್‌ಸೀಸ್ ಲಿಮಿಟೆಡ್‌ನ ನಿರ್ದೇಶಕರಾದ ರೀನಾ ಶುಕ್ಲಾ ಮಾತನಾಡಿ, ಹಲವಾರು ಸವಾಲುಗಳ ಹೊರತಾಗಿಯೂ, ಶಕ್ತಿ ಮತ್ತು ಉತ್ಸಾಹದಿಂದ ಅಭ್ಯುದಯ ಹೊಂದಿದ ಮಹಿಳಾ ಉದ್ಯಮಿಗಳನ್ನು ಗುರುತಿಸುತ್ತಿರುವುದು ಹೆಮ್ಮೆಯ ವಿಷಯ. ಗೋಲ್ಡನ್ ಗರ್ಲ್ಸ್ ಪ್ರಶಸ್ತಿಗಳು ಅವರ ಸಾಧನೆಗಳನ್ನು ಗೌರವಿಸುವ ಮಾರ್ಗವಾಗಿದೆ.ಗೋಲ್ಡನ್‌ಗರ್ಲ್ಸ್‌ಪ್ರಶಸ್ತಿಗಳ 3 ನೇ ಆವೃತ್ತಿಯು ಆಭರಣ ವ್ಯಾಪಾರದ ಅತ್ಯುತ್ತಮ ಪ್ರತಿಭೆ, ಪಾಲುದಾರರು ಮತ್ತು ಬದಲಾವಣೆ ತರುವವರನ್ನು ಒಟ್ಟುಗೂಡಿಸುವ ನಿರೀಕ್ಷೆಯಿದೆ, ಇದು ವ್ಯವಹಾರದಲ್ಲಿ ಮಹಿಳಾ ಸಬಲೀಕರಣದ ಭವ್ಯ ಆಚರಣೆಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 13 ಜನ ಮಹಿಳಾ ಉದ್ಯಮಿಗಳಿಗೆ "ಗೋಲ್ಡನ್ ಗರ್ಲ್ ಪ್ರಶಸ್ತಿ ನೀಡಿಗೌರವಿಸಲಾಯಿತು.ಈಸಂಧರ್ಭದಲ್ಲಿ ಆಭರಣ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಶ್ರೀಲಕ್ಷ್ಮಿ ಕಾಮತ್, ಬಳ್ಳಾರಿಯ ಉದ್ಯಮಿಯಾದ ಭಾನುಪ್ರಸಾದ್ ನಾಯ್ಡು ಉಪಸ್ಥಿತರಿದ್ದರು.

# ಬಿವಿಎ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

**ಕೊಪ್ಪಳ :** ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿ.ವಿ.ಎ) ದೃಶ್ಯಕಲೆಯಲ್ಲಿ 2025-26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ.ಪದವಿ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಬಿ.ವಿ.ಎ ಪದವಿಯಲ್ಲಿ 3ನೇ ಸೆಮಿಸ್ಟರ್‌ನಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ.

ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ **htts;//uucms. karnataka.gov. in** ಅಥವಾ **https:// www.cavamysore. karnataka.gov. in** ಮೂಲಕವೇ ಅರ್ಜಿ ಸಲ್ಲಿಸಬೇಕು. ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರವೇಶಾತಿಗಾಗಿ ಅರ್ಹತಾ ಪರೀಕ್ಷೆಯ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ಸಹಾಯವಾಣಿ ಸಂಖ್ಯೆ 0821-2438931 ಗೆ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಮೈಸೂರು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಸಂಸ್ಥೆಯ ಡೀನ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಧಕರನ್ನು ಗುರುತಿಸಿ ಸನ್ಮಾನ ಮಾಡುತ್ತಿರುವ ಕೃಷ್ಣಾ ಮಾಳಿ ಅವರ ಕಾರ್ಯ ಮೆಚ್ಚುವಂತದ್ದು ಗುರು ಬಸವಲಿಂಗ ಮಹಾಸ್ವಾಮಿಗಳು



**ಗೋಕಾಕ :** ಸಮಾಜದ ಅಭಿವೃದ್ಧಿಗೆ ಚಿಂತನೆ ನಡೆಸಿ ಸಮಾಜವನ್ನು ಉದ್ದಾರ ಮಾಡುತ್ತಿರುವ ಸಾಧಕರನ್ನು ಗುರುತಿಸಿ ಅವರಿಗೆ ಸನ್ಮಾನ ಮತ್ತು ಗೌರವ ನೀಡಿದರೆ ಮತ್ತಷ್ಟು ಉತ್ಸಾಹ ತುಂಬುವ ನಿಟ್ಟಿನಲ್ಲಿ ಅವರು ತಮ್ಮ ಸೇವೆಯನ್ನು ಒದಗಿಸುವ ಪ್ರಯತ್ನ ಮಾಡುತ್ತಾರೆ ಸಾಧಕರಿಗೆ ಸನ್ಮಾನವೇ ಭೂಷಣ ಎಂದು ಗುರು ಬಸವಲಿಂಗ ಮಹಾ ಸ್ವಾಮೀಜಿಗಳು ಹೇಳಿದರು.

ಅವರು ಗೋಕಾಕ ಸಮುದಾಯ ಭವನದಲ್ಲಿ ನಡೆದ ಜಾರಕಿಹೋಳಿ ಸಹೋದರರ ಆಶೀರ್ವಾದದೊಂದಿಗೆ , ಯುಗಾದಿ ವಸಂತೋತ್ಸವ ಹಾಗೂ ಮಹಿಳಾ ದಿನಾಚಣೆಯ ನಿಮಿತ್ಯವಾಗಿ ಕೃಷ್ಣಾ ಮಾಳಿ ಅವರು ಹಮ್ಮಿಕೊಂಡಿರುವ ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಮಾತನಾಡಿ ಎಲೆ ಮರೆ ಕಾಯಿಯಂತೆ ಸಮಾಜ ಸೇವೇ ಮಾಡುವವರನ್ನು ಗುರುತಿಸುವುದು, ಒಳ್ಳೆಯದು ಹಾಗು ಆದರ್ಶ ದಂಪತಿಗಳಿಗೆ ಸನ್ಮಾನ ಮಾಡುತ್ತಿರುವ ಕೃಷ್ಣಾ ಮಾಳಿ ಅವರ ಕಾರ್ಯ ಮೆಚ್ಚುವಂತಹದ್ದು ಎಂದು ಹೇಳಿದರು.

ಸಾನಿಧ್ಯ ವಹಿಸಿದ ಮುತ್ತೇಶ್ವರ ಮಹಾಸ್ವಾಮಿಗಳು ಮಾತನಾಡಿ ಸಮಾಜ ಸೇವೆ ಜೊತೆಗೆ ತಂದೆ ತಾಯಿಯ ಸೇವೆ ಮಾಡಿದರೆ ಪುಣ್ಯ ಪ್ರಾಪ್ತಿಯಾಗುತ್ತದೆ ಮನುಷ್ಯ ಸಾಧನೆ ಮಾಡದೆ ಸತ್ತರೆ ಸಾವಿಗೆ ಅವಮಾನ ಮಾಡಿದಂತಾಗುತ್ತದೆ ಹಣ ಅಂತಸ್ತು ಅಧಿಕಾರ ನಮ್ಮ ಕಷ್ಟ ಕಾಲದಲ್ಲಿ ಕಾಯುವುದಿಲ್ಲ ಬೇರೆಯವರಿಗೆ ಮಾಡಿದ ಸಹಾಯ ನಮ್ಮಲ್ಲಿರುವ ಸಂಸ್ಕಾರ ಚಾರಿತ್ರ್ಯ ನಮ್ಮನ್ನು ಕಾಪಾಡುತ್ತದೆಂದು ಹೇಳಿದರು.

ಈ ಸಮಯದಲ್ಲಿ ಸತೀಶ ಜಾರಕಿಹೊಳಿ ಅವರ ಆಪ್ತ ಸಹಾಯಕ ಪಾಂಡು ಮನ್ನಿಕೇರಿ.ಸುಶೀಲಾ ಸಂಜೀವಕುಮಾರ.ಮಲ್ಲಿಕಾರ್ಜುನ ಕಬ್ಬೂರ. ಅರ್ಜುನ ನಾಯಿಕವಾಡಿ. ಮರಿಯಪ್ಪ ಮರೆಪ್ಪಗೊಳ. ಅಬ್ದುಲ್ ಸತ್ತಾರ್ ಮುಲ್ಲಾ. ಸುರೇಶ ಜಾಧವ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮುರಿಗೆಪ್ಪ ಮಾಲಗಾರ.ಭೀಮಶಿ ಕೆಂಪವ್ವಗೊಳ. ನಿತ್ಯಾ ಆಚಾರ ಸೇರಿದಂತೆ ಅನೇಕರಿದ್ದು ಕಾರ್ಯಕ್ರಮವನ್ನು ದೀಕ್ಷಾ ಪೂಜೇರಿಸ್ವಾಗತಿಸಿಮುರಿಗೆಪ್ಪಮಾಲಗಾರ.ನಿರೂಪಿಸಿ. ಕೃಷ್ಣಾ ಮಾಳಿ ವಂದಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ, ಆದರ್ಶ ದಂಪತಿಗಳಿಗೆ, ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ, ಪ್ರಶಸ್ತಿ ಪ್ರಮಾನ ಪತ್ರ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

# ಸತ್ಯ ಶುದ್ಧ ಕಾಯಕ ನಿಷ್ಠೆಯಿಂದ ಮಾತ್ರ ಸಮಾಜ ಪರಿಶುದ್ದ: ಡಾ.ವೀರಣ್ಣ ಚರಂತಿಮಠ





**ಬಾಗಲಕೋಟೆ :** ಸತ್ಯ ಶುದ್ದ ಕಾಯಕ ನಿಷ್ಠೆಯಿಂದ ಮಾತ್ರ ಸಮಾಜ ಪರಿಶುದ್ದತೆ ಸಾಧ್ಯವೆಂಬ ಶರಣ ಚಿಂತನೆಯನ್ನು ಜಗತ್ತಿಗೆ ಸ್ವತ ಪ್ರಯೋಗದ ಮೂಲಕ ಸಾರಿ ಯಶಸ್ವಿಯಾದವರು ಕಾಯಕಯೋಗಿ ಬಸವಣ್ಣನೆಂದು ಬಿ.ವಿ.ವಿ.ಸಂಘದ ಕಾಯಾರ್ಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಬಾಗಲಕೋಟೆ, ಅಖಿಲ ಭಾರತ ವೀರಶೈವ ಮಹಾಸಭಾ ಬಾಗಲಕೋಟೆ, ಶರಣ ಸಾಹಿತ್ಯ ಪರಿಷತ್ತು,ಶಿವಾನುಭವ ಸಮಿತಿ, ಕಣವಿ ಟ್ರಸ್ಟ್ ,ಬಿವಿವಿ ಅಕ್ಕನ ಬಳಗ,

ಕದಳಿ ವೇದಿಕೆಗಳ ಸಹಯೋಗದಲ್ಲಿ ಜರುಗಿದ ಭಕ್ತಿ ಭಂಡಾರಿ ಬಸವಣ್ಣನವರ ಜಯಂತಿ ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದು ಜಾಗತಿಕವಾಗಿ ಪ್ರತಿ ದೇಶಗಳು ವಿಚಿತ್ರ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ, ಅವೆಲ್ಲವೂ ಪರಿಹಾರಗಳಿಗಾಗಿ ತಾಕಲಾಡುತ್ತಿವೆ,

ಆದರೆ ಭಾರತ ದೇಶಮಾತ್ರ ಅಂತಹ ಎಲ್ಲ ಬಗೆಯ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ವೇದೋಪನಿಷತ್ ಮೊದಲ ಗೊಂಡು ಕಾಲಕ್ಕಗಣುಗವಾಗಿ ಬಸವಣ್ಣವರಂತಹ ಮಹಾಶಿವಶರಣರು ಜನಿಸಿ ಜಗತ್ತಿಗೆ ಭಾರತವೇ ವಿಶ್ವಗುರು ಎಂಬುದನ್ನು ಮತ್ತೆ ಮತ್ತೆ ಸಾಬೀತು ಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಅದ್ದೂರಿಯಾಗಿ ಜರುಗಿದ ವಚನ ಸಂಪುಟಗಳ ಮೇರವಣಿಗೆ: ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಕೇಂದ್ರ ಕಛೇರಿಯಲ್ಲಿ ಬಸವಣ್ಣನವರ ವಚನ ಸಂಪುಟಗಳನ್ನು ಪಲ್ಲಕ್ಕಿಯಲ್ಲಿ ಇಟ್ಟು ಪೂಜೆ ಸಲ್ಲಿಸಿ, ಬೀಳೂರ ಗುರುಬಸವ ಮಹಾಸ್ವಾಮಿಗಳ ದೇವಸ್ಥಾನಿಂದ ಮೇರವಣಿಗೆ ಪ್ರಾರಂಭಗೊಂಡು,ಕಾಲೇಜು ರಸ್ತೆ,ಬಸವೇಶ್ವರವೃತ್ತ,ಸ್ಟೇಷನ್‌ರಸ್ತೆಮೂಲಕ ವಲ್ಲಭಭಾಯಿ ಚೌಕ, ಅಡತಬಜಾರ, ಟೀಕಿನ ಚರಂತಿಮಠದ ಬೀಳೂರ ಅಜ್ಜನ ದೇವಸ್ಥಾನಕ್ಕೆ ಆಗಮಿಸಿ ಸಂಪನ್ನಗೊಂಡಿತು. ಮೇರವಣಿಗೆಯಲ್ಲಿ 25 ಕ್ಕೂ ಹೆಚ್ಚು ಎತ್ತುಗಳ ಜೋಡಿ, ಬಸವಣ್ಣವರ ಭಾವ ಚಿತ್ರ, ಕುದರೆ ಮೇಲೆ ಏರಿದ ಬಸವಣ್ಣ ವೇಷದಾರಿ ಜನರನ್ನು ಗಮನ ಸೆಳೆಯಿತು. ಇದೇ ಸಂದರ್ಭದಲ್ಲಿ ನಗರದಲ್ಲಿರುವ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಗುಳೇದಗುಡ್ಡಮುರಘಾಮಠದಪೂಜ್ಯರಾದ ಕಾಶಿನಾಥಮಹಾಸ್ವಾಮಿಗಳು, ಸಂಘದ ಗೌರವ ಕಾರ್ಯಧರ್ಶಿ ಮಹೇಶ ಅಥಣಿ, ಎಸ್.ಎಸ್.ಪಾವಟೆ, ರಾಜು ತಪಶೆಟ್ಟಿ, ಬಸವರಾಜ ಮುಕುಪಿ, ವಿಜಯಕುಮಾರ ಅಂಗಡಿ, ಅಶೋಕ ಸಜ್ಜನ(ಬೇವೂರ) ಗುರುಬಸವ ಸೂಳಿಬಾವಿ, ಮಹಾಂತೇಶ ಶೆಟ್ಟರ.,ಶಿವಲಿಂಗಪ್ಪ ಮೊರಬದ, ಪಂಡಿತ ಅರೆಬ್ಬಿ, ರುದ್ರು ಅಕ್ಕಿಮರಡಿ, ಮಹೇಶ ಅಂಗಡಿ,ವೀರಣ್ಣ ಹಲಕುರ್ಕಿ, ಗಂಗಾಧರ ನೆರೆಗಲ್,ಕುಮಾರಜಿಗಜಿನ್ನಿ,ಮಲ್ಲಿಕಾರ್ಜುನ ಸಾಸನೂರ, ಪ್ರಕಾಶ ರೇವಡಿಗಾರ, ಶರಣಪ್ಪ ಗುಳೆದ, ಅಶೋಕ ರೇವಣಕೊಪ್ಪ, ರಾಜು ಪಲ್ಲೆದ,ಸಿದ್ದರಾಮ ಮನಹಳ್ಳಿ, ಕುಮಾರಸ್ವಾಮಿ ಹಿರೇಮಠ, ಸಂಘದ ಆಡಳಿತಾಧಿಕಾರಿಗಳಾದ ವಿ.ಆರ್.ಶಿರೋಳ, ಡಾ.ವಿಜಯಕುಮಾರ ಕಟಗಿಹಳ್ಳಿಮಠ ಸೇರಿದಂತೆ ಎಲ್ಲ ಸಂಘದ ಸದಸ್ಯರು, ಹಿತೈಸಿಗಳು, ವಿವಿಧ ಮಹಾವಿದ್ಯಾಲಯಗಳ ಪ್ರಾಚಾರ್ಯರು, ವಿದ್ಯಾರ್ಥಿಗಳು ಸಿಬ್ಬಂದಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಡಾ. ಬಸವರಾಜಖೋತಗೆ ಪಿ.ಎಚ್. ಡಿಪದವಿ ಪ್ರಧಾನ

**ಬಾಗಲಕೋಟೆ:**ನಗರದಬಿ.ವಿ.ವಿ.ಸಂಘದಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಭೌತಶಾಸ್ತ್ರ ವಿಷಯದ ಉಪನ್ಯಾಸಕರಾದಮತ್ತು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯಾದ ಡಾ. ಬಸವರಾಜ ಖೋತಗೆ ಭೌತಶಾಸ್ತ್ರ ವಿಷಯದ "ಸಿಂಥೆಸಿಸ್ ಅಂಡ್ ಕ್ಯಾರೆಕ್ಟರೈಜೇಶನ ಆಫ್ ಪಾಲಿಮರ್ ಬೇಸ್ಡ್ ನ್ಯಾನ್ಯೊಮಟೀರಿಯಲ ಹ್ಯಾಜ್ ಹಜರ್ಡ್ಸ್" ಗ್ಯಾಸ್ ಸೆನ್ಸರ್" ಎಂಬ ವಿಷಯದ ಮೇಲೆ ಮಂಡಿಸಿದ ಸಂಶೋಧನಾ ಮಹಾ ಪ್ರಬಂಧಕ್ಕೆ ದಿನಾಂಕ 11-04-2025ರಂದು ನಡೆದ 13ನೇಘಟಿಕೋತ್ಸವದಲ್ಲಿ ಎಚ್ ಡಿ ಪದವಿ ಪ್ರಧಾನ ಮಾಡಲಾಗಿದೆ. ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯರು ಮತ್ತುಪ್ರಸ್ತುತ ರಾಯಚೂರು ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗದ ನಿರ್ದೇಶಕರಾದ ಡಾ. ಆರ್. ಎಚ್. ಫತ್ತೇಪುರಅವರು ಮಾರ್ಗದರ್ಶನ ಮಾಡಿದ್ದರು.

ಬಿವಿವಿ ಸಂಘದ ಕಾರ್ಯಾಧ್ಯಕ್ಷರಾದಡಾ. ವೀರಣ್ಣಸಿ. ಚರಂತಿಮಠ, ಗೌರವ ಕಾರ್ಯದರ್ಶಿಗಳಾದ



ಶ್ರೀ. ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಶ್ರೀ. ಗುರುಬಸವ ಸೂಳಿಭಾವಿಯವರು, ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಎಲ್ಲಾ ಬೋಧಕಮತ್ತು ಬೋಧಕೇತರ ಸಿಬ್ಬಂದಿಗಳು ಅಭಿನಂದನೆಯನ್ನು ಸಲ್ಲಿಸಿದ್ದಾರೆ.

# "ನಮ್ಮ ಸಂಸ್ಕೃತಿ-ನಮ್ಮ ಹೆಮ್ಮೆ"-ಜಾನಪದಉತ್ಸವ 2025 ಕಾರ್ಯಕ್ರಮ

ಬಾಗಲಕೋಟೆಯ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನಐ.ಕ್ಯೂ.ಎ.ಸಿ. ಹಾಗೂ ಸಾಂಸ್ಕೃತಿಕ ಘಟಕಗಳಆಶ್ರಯದಲ್ಲಿಕಾಲೇಜು ಶಿಕ್ಷಣ ಇಲಾಖೆಯಆದೇಶದಂತೆ "ನಮ್ಮ ಸಂಸ್ಕೃತಿ-ನಮ್ಮ ಹೆಮ್ಮೆ" ಶೀರ್ಷಿಕೆಯಡಿಯಲ್ಲಿ 2025ನೇ ಸಾಲಿನಜಾನಪದಉತ್ಸವವು ವಿಜೃಂಭಣೆಯಿಂದಜರುಗಿತು.




ದೇಸೀ ಸಂಸ್ಕೃತಿಯನ್ನು ಪುನಃಶ್ಚೇತನಗೊಳಿಸುವ ಉದ್ದೇಶದೊಂದಿಗೆ ಗ್ರಾಮೀಣ ಬದುಕನ್ನು ಪ್ರತಿಬಿಂಬಿಸುವ ಹಲವು ಚಟುವಟಿಕೆಗಳನ್ನೊಳಗೊಂಡ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಪ್ರಾಂಶುಪಾಲರಾದ ಪ್ರೊ. ಗೀತಾಂಜಲಿ ಶ್ರೀನಿವಾಸರಾವ್‌ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಇಲ್ಲಿಓದುತ್ತಿರುವ ವಿದ್ಯಾರ್ಥಿನಿಯರಲ್ಲಿಗ್ರಾಮೀಣ ಪ್ರದೇಶಗಳಿಂದ ಬರುತ್ತಿವವರೆಹೆಚ್ಚಾಗಿದ್ದುತಮ್ಮಹಳ್ಳಿಗಾಡಿನಸಂಸ್ಕೃತಿ,ಜೀವನ ಶೈಲಿಯ ಮಹತ್ವವನ್ನುಅರಿತುಕೊಂಡುಅಂತೆಯೆಜೀವನ ನಡೆಸುವುದು ಒಳ್ಳೆಯದೆಂದರು. ಕಾಲೇಜಿನ ಐಕ್ಯೂಎಸಿ ಘಟಕದ ಸಂಚಾಲಕ ಡಾ. ಬಿ.ಎಂ. ಬಡಿಗೇರ ಪ್ರಾಸ್ತಾವಿಕ ಹಾಗೂ ಸ್ವಾಗತ ನುಡಿಗಳನ್ನು ಹೇಳಿದರು. ಸಾಂಸ್ಕೃತಿಕಘಟಕದ ಸಂಚಾಲಕ ಡಾ. ಮೌನೇಶಕಮ್ಮಾರ 'ಜನಪದರಜೀವನ ವಿಷಯದ ಭಾಷಣ ಮಾಡಿದರು.

ಡಾ. ಎಂ.ಎಚ್. ತಹಶೀಲ್ದಾರ ಹಾಗೂ ಸುನೀಲ ನಡಕಟ್ಟಿ, ಪ್ರವೀಣ ಬಿ. ವೇದಿಕೆಯಲ್ಲಿದ್ದರು. ನಂತರ ವಿದ್ಯಾರ್ಥಿನಿಯರಿಂದಜಾನಪದ ಸಂಭ್ರಮಜರುಗಿತು. ಉತ್ತರಕರ್ನಾಟಕದ ಮದುವೆ ಸಂಪ್ರದಾಯಕುರಿತು ಭಾಷಣ ಮಾಡಿದ ವಿದ್ಯಾರ್ಥಿನಿಯರು "ಮದುವೆ" ನಾಟಕವನ್ನು ಮನೋಜ್ಞವಾಗಿ ಅಭಿನಯಿಸಿದರು. ಬೀಸುವಕಲ್ಲು ಹಾಡು, ಸೋಬಾನೆ ಪದ, ಒಡಪು ಹೇಳುವುದು, ಒಗಟು ಬಿಡಿಸುವ, ಜನಪದ ನೃತ್ಯ, ಲಾವಣಿ, ಹಂತಿಹಾಡು, ಆಚರಣೆಯ ಹಾಡು, ಸಂಪ್ರದಾಯ ಹಾಡು, ಮೋಹರಂ ಹಾಡು, ಬಂಜಾರ ನೃತ್ಯ ಹೀಗೆ ದೇಸೀ ಶ್ರೀಮಂತ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಲವು ಪ್ರದರ್ಶನಗಳು ಜರುಗಿದವು. ದೇಸೀಅಹಾರತಯಾರಿಕೆ-ಪ್ರದರ್ಶನಕುರಿತುಕಾಲೇಜಿನಎಲ್ಲ ವಿದ್ಯಾರ್ಥಿನಿಯರನ್ನೊಳಗೊಂಡ ತಂಡರಚಿಸಲಾಗಿತ್ತು. ಈ ತಂಡಗಳು ಸಿದ್ಧ ಪಡಿಸಿದ ಸಜ್ಜೆ ಜೋಳದ ರೊಟ್ಟಿ, ಶೇಂಗಾ ಹೋಳಿಗೆ, ಕರ್ಚಿಕಾಯಿ, ಕರದಂಟು, ಚಪಾತಿ, ಬದನೆಕಾಯಿ, ಬಗೆಬಗೆಯಚಟ್ನಿ-ಪಲ್ಯ, ವಿವಿಧರುಚಿಯಅನ್ನ, ಹಪ್ಪಳ, ಸಂಡಿಗೆ ಮುಂದಾದ ದೇಸೀ ಅಹಾರ ಪದಾರ್ಥಗಳನ್ನು ಪ್ರದರ್ಶಿಸಿ ನಂತರಎಲ್ಲರು ಭೋಜನ ಮಾಡಿದರು. ಕಾಲೇಜಿನಎಲ್ಲ ವಿದ್ಯಾರ್ಥಿನಿಯರು ಇಳಕಲ್ ಸೀರೆ, ಗುಳೇದಗುಡ್ಡ ಕುಪ್ಪಸಉಡುಪಿನಲ್ಲಿ ಸಂಭ್ರಮಿಸಿದರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಪಂಜೆ-ಧೋತಿ-ಗಾಂಧಿಟೋಪಿದಿರಿಸುಧರಿಸಿಮಿಂಚಿದರು.

ಎಲ್ಲೆಡೆ ಖುಷಿ-ಸಂಭ್ರಮ ಮನೆಮಾಡಿತ್ತು.ಇದರ ಹಿಂದಿನ ದಿವಸ ಜಾನಪದ ಉತ್ಸವ-2025 ಅಂಗವಾಗಿ ಕರ್ನಾಟಕ ಬಯಲಾಟಅಕಾಡೆಮಿ ಹಾಗೂ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜು ಬಾಗಲಕೋಟೆ ಸಹಯೋಗದಲ್ಲಿವಿಚಾರ ಸಂಕಿರಣ-ಹಾಡುಗಾರಿಕೆ-ಪ್ರದರ್ಶನ ಒಳಗೊಂಡ ಬಯಲಾಟ ಸಂಭ್ರಮಕಾರ್ಯಕ್ರಮಜರುಗಿತ್ತು. ಕಾಲೇಜುಅಭಿವೃದ್ಧಿ ಸಮಿತಿಯಅಧ್ಯಕ್ಷರು ಹಾಗೂ ಸದಸ್ಯರ ಸಹಕಾರದಿಂದಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದಎಲ್ಲಾಬೋಧಕಬೋಧಕೇತರಸಿಬ್ಬಂದಿ ವರ್ಗದವರುಹಾಗೂವಿದ್ಯಾರ್ಥಿನಿಯರುಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಶಾಸಕ ಯತ್ನಾಳ ರಕ್ಷಣೆಗೆ ಹೆಚ್ಚಿನ ಭದ್ರತೆ ನೀಡಲು ಒತ್ತಾಯ



**ವಿಜಯಪುರ :** ಕೆಲ ಮುಸ್ಲಿಂ ಸಂಘಟನೆಗಳು ಏ. 28ರಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡ ಹಿನ್ನೆಲೆಯಲ್ಲಿ ಅಂದು ಯತ್ನಾಳ ಹಾಗೂ ಅವರಿಗೆ ಸಂಬಂಧಿಸಿದ ಆಸ್ತಿಪಾಸ್ತಿಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಯುವ ಮುಖಂಡ ಭೀಮು ಮಾಶ್ಯಾಳ ಅವರ ನೇತೃತ್ವದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಶನಿವಾರ ಅನೇಕರು ಮನವಿ ಸಲ್ಲಿಸಿದ್ದಾರೆ.

ಏ.28ರಂದು ವಿಜಯಪುರ ನಗರದಲ್ಲಿ ಕೆಲವು ಮುಸ್ಲಿಂ ಸಂಘಟನೆಗಳು ನಗರ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಅವರ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು ಈ ಪ್ರತಿಭಟನೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ನಗರ ಶಾಸಕರಿಗೆ ಸಾಮಾಜಿಕ ಜಾಲತಾಣಗಳ ಮುಖಾಂತರ ವಿಡಿಯೋ ಹಾಗೂ ಆಡಿಯೋ ಹರಿಬಿಟ್ಟು ಪ್ರಾಣ ಬೆದರಿಕೆಗಳನ್ನು ಹಾಕುತ್ತಿದ್ದು, ಕಾರಣ ನಗರ ಶಾಸಕರಿಗೆ ವೈಯ್ಯಕ್ತಿಕವಾಗಿ ಹಾಗೂ ಅವರ ಒಡೆತನದ ಶಿಕ್ಷಣ ಸಂಸ್ಥೆಗಳು, ಬ್ಯಾಂಕುಗಳು ಹಾಗೂ ಅವರ ನಿವಾಸಕ್ಕೆ ಹೆಚ್ಚಿನ ಭದ್ರತೆಯನ್ನು ನೀಡಬೇಕೆಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

# ಜನಸಂಪರ್ಕ ಕಾರ್ಯಾಲಯದಲ್ಲಿ ಬಸವ ಜಯಂತಿ ಆಚರಣೆ



**ಬಾಗಲಕೋಟೆ :** ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿಯ ವತಿಯಿಂದ ವಿಧಾನ ಪರಿಷತ್ ಸದಸ್ಯ ಪಿ.ಹೆಚ್. ಪೂಜಾರ ಅವರ ಜನಸಂಪರ್ಕ ಕಾರ್ಯಾಲಯದಲ್ಲಿ ಬಸವ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನಿವೃತ್ತ ಸಂಸ್ಕೃತ ಶಿಕ್ಷಕರಾದ ಮಲ್ಲೇಶ ಎಂ. ಹೊಸಮನಿ ಅವರು ಮಾತನಾಡಿ, "ಕಾಯಕಯೋಗಿ, ಜಗಜ್ಯೋತಿ, ಸಮಸಮಾಜದ ಹರಿಕಾರ, ಸಾಮಾಜಿಕ ಮತ್ತು ಶೈಕ್ಷಣಿಕ ಸಮತಾವಾದಿ, ಮಹಾ ಮಾನವತಾವಾದಿ ಬಸವಣ್ಣನವರು 12ನೇ ಶತಮಾನದಲ್ಲಿ ನಡೆದ ಕ್ರಾಂತಿಕಾರಿ ಚಿಂತನೆಗಳ ಮೂಲಕ ಸಮಾನತೆಯ ಸಮಾಜವನ್ನು ರೂಪಿಸಲು ಶ್ರಮಿಸಿದರು. ಅವರು ಮಹಿಳೆಯರಿಗೆ ಸಮಾನ ಸ್ವಾತಂತ್ರ್ಯ ನೀಡಿದ ಆದರ್ಶ ವ್ಯಕ್ತಿ. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲೂ ಬೇಡ, ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬನ್ನಿಸಬೇಡ, ಇದಿರ ಹಳಿಯಲೂ ಬೇಡ' ಎಂಬ ಮಾತುಗಳಿಂದ ಅವರು ಅಂತರಂಗ ಮತ್ತು ಬಹಿರಂಗ ಶುದ್ಧತೆಯ ಮಹತ್ವವನ್ನು ಸಾರಿದರು," ಎಂದರು.

ಬಸವಣ್ಣನವರ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು, ಮಕ್ಕಳಿಗೆ ಮಾತಾ?ಪಿತೃ ಭಕ್ತಿ ಹಾಗೂ ಗುರುಗಳ ಬಗ್ಗೆ ಶ್ರದ್ಧೆಯನ್ನು ಬೆಳೆಸುವುದು ನಿಜಾರ್ಥದಲ್ಲಿ ಬಸವ ಜಯಂತಿಯನ್ನು ಸಾರ್ಥಕಗೊಳಿಸುವ ಮಾರ್ಗವಾಗಿದೆ."

ಬಳಿಕ ವಿರುಪಾಕ್ಷ ಅಮೃತಕರ ಮಾತನಾಡಿ, "ಬಸವಣ್ಣನವರ ಬೋಧನೆಗಳು ಭಕ್ತಿ, ನಿಸ್ವಾರ್ಥತೆ ಮತ್ತು ನೈತಿಕ ನಡವಳಿಕೆಯನ್ನು ಒತ್ತಿ ಹೇಳುತ್ತವೆ. ಅವರು ಜಾತಿವ್ಯವಸ್ಥೆಯನ್ನು ವಿರೋಧಿಸಿ, ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡಿದರು. ಅವರ ವಚನಗಳು ನ್ಯಾಯ, ಸಾಮರಸ್ಯದ ಸಮಾಜದತ್ತ ಜನರನ್ನು ಪ್ರೇರೇಪಿಸುತ್ತವೆ," ಎಂದರು.

"ಬಸವ ಜಯಂತಿಯ ಸಂದರ್ಭದಲ್ಲಿ ನಾವು ಸಹಾನುಭೂತಿ, ಗೌರವ ಮತ್ತು ನಿಸ್ವಾರ್ಥತೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ. ಪ್ರೀತಿ, ಸಮಾನತೆ ಮತ್ತು ಸಾಮರಸ್ಯದ ಮೂಲಭೂತ ಅಂಶಗಳ ಮೇಲೆ ಸಮಾಜವನ್ನು ನಿರ್ಮಿಸೋಣ," ಎಂದು ಅವರು ಕರೆ ನೀಡಿದರು.

ಈಸಂದರ್ಭದಲ್ಲಿಹಿರಿಯರಾಗಿಕಳಕಪ್ಪಬಾದವಾಡಗಿ, ಚಂದ್ರಕಾಂತ ಕೇಸನೂರ, ಶಂಭುಗೌಡ ಪಾಟೀಲ, ಸಂಗಣ್ಣಗೌಡ ಗೌಡರ, ಸಂಜು ಡಿಗ್ಗಿ, ಮಲ್ಲೇಶ ಸುರಪುರ, ಡಾ. ಕ್ರೇಷ್ಣಾ ಚೌಧರಿ, ರಾಜು ಶ್ರೀರಾಮ, ಶ್ರೀಮತಿ ಉಮಾದೇವಿ ಗವಿಮಠ, ಗಂಗುಬಾಯಿ ರಜಪೂತ, ಶಾಂತಾಬಾಯಿ ಗೋಣಿ, ವಿಜಯಲಕ್ಷ್ಮೀ ಅಂಗಡಿ, ಗುರುಬಸಯ್ಯ ಪೂಜಾರಿ (ಹಿರೇಮಠ), ಬಸವರಾಜ ಹೊಸಮನಿ, ಹುಲಿಗೆಪ್ಪ ಗುರಿಕಾರ, ಪಂಚಾಕ್ಷರಿ ಹಿರೇಮಠ, ರಾಜು ನಾಯಕ ಹಾಗೂ ಇತರ ಕಾರ್ಯಕರ್ತರು ಉಪಸ್ಥಿತರಿದ್ದರು.

# ನರೇಗಾ ಯೋಜನೆ ಸಮರ್ಪಕ ಜಾರಿಗಾಗಿ ಪ್ರತಿಭಟನೆ



**ವಿಜಯಪುರ :** ಜಿಲ್ಲೆಯ ನರೇಗಾ ಯೋಜನೆಯನ್ನು ಸಮರ್ಪಕ ಜಾರಿಗಾಗಿ ಸತತ 100 ದಿನಗಳ ಕೆಲಸಕ್ಕಾಗಿ ಒತ್ತಾಯಿಸಿ ಜಿಲ್ಲಾಪಂಚಾಯತಆವರಣದಲ್ಲಿಪ್ರತಿಭಟನೆ ಹಮ್ಮಿಕೊಂಡು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರಿಗೆ ಮನವಿ ಸಲ್ಲಿಸುವ ಸಂದರ್ಭದಲ್ಲಿಹಾಗೂಡಿ.ಎಸ್.-1ಅಧಿಕಾರಿ ಬಲವಂತ ರಾಠೋಡ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರಿ ಮಾತನಾಡಿ, ವಿಜಯಪುರ ಜಿಲ್ಲೆ ಕರ್ನಾಟಕದಲ್ಲಿಯೇ ಅತಿ ಹೇಚ್ಚು ವಲಸೆ ಹೋಗುವ ಕೂಲಿಕಾರರ ಜಿಲ್ಲೆಯಾಗಿದೆ. ನರೇಗಾ ಬಡವರ ಪಾಲಿಗೆ ವರದಾನವಾಗಬೇಕಾಗಿದೆ. ಯೋಜನೆ ಬಡವರ ಪಾಲಿಗೆ ಶಾಪವಾಗಿ ಪರಿಣಮಿಸಲು ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿ ಯೋಜನೆ ದಾರಿ ತಪ್ಪಿದ್ದು. ಜಿಲ್ಲಾ ಪಂಚಾಯತಸಿ.ಇ.ಓರವರಆಲಕ್ಷತನದಿಂದ ಕೆಳ ಹಂತದ ಅಧಿಕಾರಿಗಳ ನಿರ್ಲಕ್ಷದಿಂದ ಯೋಜನೆ ಹಳ್ಳ ಹಿಡಿದಿದೆ. ಜಿಲ್ಲೆಯ ಹಲವಾರು ಪಂಚಾಯತಗಳ ಕೆಲಸಕ್ಕಾಗಿ ಫಾರ್ಮ ನಂ: 6 ಅರ್ಜಿಸಲ್ಲಿಸಿದ್ದರು ಕೆಲಸ ಕೋಡುತ್ತಿಲ್ಲಾ ಕೆಲಸ ಕೊಡದೆ ಇರುವಾಗ ನಿರುದ್ಯೋಗ ಭತ್ಯಗಾಗಿ ಆದೇಶ ಖಚಿತ ಜಾರಿಮಾಡದೆ ಯೋಜನೆ ಮಹತ್ವವನ್ನು ಹಾಳುಮಾಡಿದ್ದಾರೆ ಇದಕ್ಕೇ ನೇರವಾಗಿ ಸಿಇಓ ಅವರೇ ಕಾರಣಾಗಿದ್ದಾರೆ ಎಂದು ಆಕ್ರೋಶವ್ಯಕ್ತಪಡಿಸಿದ್ದಾರೆ.

ಇದೇ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ ಮಾತನಾಡಿ, ಮೇ 1ರಿಂದ ಸತತವಾಗಿ ಕೆಲಸ ಕೊಡಬೇಕು. ಒಂದೆ ಬಾರಿಗೆ ಎನ್. ಎಮ್ ಆರ್ ಫಾರ್ಮ್ ಕೊಡಬೇಕು. ಈಗಾಗಲೆ ಒಂಬಡ್ಸ್‌ಮನ ನಿರುದ್ಯೋಗ ಭತ್ಯೆಯ ಆದೇಶವನ್ನು ಜಾರಿಮಾಡಿ ನಿರುದ್ಯೋಗ ಭರ್ತಿಗೊಳಿಸಬೇಕು. ಗೋಲಗೇರಿ ಗ್ರಾಂ. ಪಂ. ಆಪರೇಟರನ್ನು ಕೂಡಲೆ ವರ್ಗಾವಣೆ ಮಾಡಬೇಕು (ಸಿಂದಗಿ ತಾಲೂಕ) ಆಲಮೇಲ ತಾಲೂಕ ಬಗಲೂರ ಗ್ರಾಂ.ಪಂ 80-ಜನರ ಫಾರಂ: ನಮೂನೆ 6 ತುಂಬಿಕೊಟ್ಟರು ಬರಿ 40 ಜನಕ್ಕೆ ಕೆಲಸ ಕೊಟ್ಟಿದ್ದಾರೆ ಕೂಡಲೆ ಉಳಿದ ಮಹಿಳೆಯರಿಗೆ ಕೇಲಸ ಕೋಡಬೇಕು ಎಂದರು.

ಇದೇ ಸಂದರ್ಭದಲ್ಲಿ ಕೃಷಿ ಕೂಲಿ ರಾಜ್ಯ ಸಮಿತಿ ಜಂಟಿ ಕಾರ್ಯದರ್ಶಿ ದಾವಲಸಾಬ ನದಾಫ್ ಮಾತನಾಡಿ, ದೇವರಹಿಪ್ಪರಗಿ ಕೊಂಡಗೂಳಿ ಗ್ರಾಂ. ಪಂ ಫಾರ್ಮ ನಂ: 6 ಕೋಟ್ಟು 20-ದಿನಗಳು ಕಳಿದಿವೆ ಕೂಡಲೆ ಕೇಲಸ ಕೋಡಬೇಕು. ಗ್ರಾಂ.ಪಂ ಅಭಿವೃದ್ಧಿ ಅಧಿಕಾರಿ ಹಾಗೂ ತಾಲೂಕ ಪಂಚಾಯತ ಇ.ಓ ಮತ್ತು ಎ.ಡಿ ಪೋ?ನ್ ಕರೆಗಳು ಸ್ವಿಕರಿಸುತ್ತಿಲ್ಲಾ ಯಾಕೆ?. ದೇವರ ಹಿಪ್ಪರಗಿ ಹಾಗೂ ತಾಳಿಕೋಟಿ ಬಂಟನೂರ ಗ್ರಾಂ.ಪಂಯಲ್ಲಿ ಫಾರ್ಮ: 6 ಕೋಟ್ಟಿದ್ದು ಕೆಲಸ ಕೋಡಬೇಕು ಎಂದು ಒತ್ತಾಯಿಸಿದರು. ಕೆಪಿಆರೆಸ್ ಸಿಂದಗಿಯ ರಮೇಶ ಸಾಸಬಾಳ ಮಾತನಾಡಿ, ಸಿಂದಗಿ ತಾಲೂಕಿನ ಗೋಲಗೇರಿ ಗಾಂ.ಪಂ. ಅಭಿವೃದ್ಧಿ ಅಧಿಕಾರಿ ತಾಂತ್ರಿಕ ಸಹಾಯಕರು ಕೂಡಿಕೊಂಡು 2023-24 ಸಾಲಿನ ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಹೈಟೆಕ್ ಶೌಚಾಲಯಗಳು ಕಳಪೆ ಆಗಿದ್ದು ಇ.ಓ. ಮತ್ತು ಎ.ಡಿ ಕಾರಣರಾಗಿದ್ದಾರೆ ಕೂಡಲೆ ಕ್ರಮಕೈಗೊಳ್ಳಬೇಕು. ಉದ್ಯೋಗ ಖಾತ್ರಿ ಕೆಲಸ ಮಾಡುವ ಸ್ಥಳದಲ್ಲಿ ನೆರಳಿನ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಬೇಕು. ಸಿಂದಗಿ ತಾಲೂಕಿನ ಗೋಲಗೇರಿ ಗ್ರಾಂ.ಪಂ ಯಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳ ಹೈಟೆಕ್ ಶೌಚಾಲಯಗಳ ಕಳಪೆ ಕಾಮಗಾರಿಯಾಗಿದ್ದು ಇದಕ್ಕೆ ಸಂಬಂದಿಸಿದಂತೆ ದೂರ ಕೊಟ್ಟಿದ್ದರು ಇದಕ್ಕೆ ಸಂಬಂದಿಸಿದಮತೆ ದೂರ ಕೊಟ್ಟಿದ್ದರು ಕ್ರಮ ವೈಹಿಸಿರುವುದಿಲ್ಲಾ ಯಾಕೆ? ತಕ್ಷಣ ಇವೆಲ್ಲ ತಪ್ಪುಗಳನ್ನು ತಿದ್ದಿಕೊಂಡು ದುಡಿಯುವ ವರ್ಗಕ್ಕೆಕೆಲಸನೀಡಬೇಕೆಂದುಅಗ್ರಹಿಸಿದ್ದರು. ಒಂದುವಾರದಲ್ಲಿ ನಮ್ಮ ಬೇಡಿಕೆಗೆ ಸರ್ಕಾರ ಸ್ಪಂಧಿಸದಿದ್ದರೆ ಮುಂಬರುವ ದಿನದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಹಾಗೂ ಮುಂದೆ ಆಗುವ ಸಮಸ್ಯೆಗೆ ನೇರವಾಗಿ ಸರ್ಕಾರವೇ ಕಾರಣವಾಗುತ್ತದೆ.

ಇದೇ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ಸಿಐಟಿಯು ಜಿಲ್ಲಾ ಸಮಿತಿ ಸದಸ್ಯ ಈರಣ್ಣ ಬೆಳ್ಳುಂಡಗಿ, ಬಿ.ಸಿ.ಎಮ್. ಹಾಸ್ಟೇಲ್ ನೌಕರರ ಜಿಲ್ಲಾಧ್ಯಕ್ಷ ಹುಲಗಪ್ಪ ಚಲವಾದಿ, ಶಾಂತಪ್ಪ ಹೊಸಮನಿ, ಅನ್ನಪೂರ್ಣ, ಬಾಬು ರಾಠೋಡ, ಶ್ರೀಮಂತ ರಾಠೋಡ ಈ ಧರಣಿ ಸತ್ಯಾಗ್ರಹದಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳಾ ಕೂಲಿಕಾರ್ಮಿಕರು ಪಾಲ್ಗೊಂಡಿದ್ದರು.

# ಪ್ರಭುಲಿಂಗೇಶ್ವರ ಹರಿವಾಣೋತ್ಸವ ಸಂಭ್ರಮ

**ಚಿಮ್ಮಡ:** ಗ್ರಾಮದಆರಾಧ್ಯದೇವರಾದಶ್ರೀಪ್ರಭುಲಿಂಗೇಶ್ವರರ ಹರಿವಾಣೋತ್ಸವ ಹಾಗೂ ರುದ್ರಾಭಿಷೇಕ ಮಹಾಮಂಗಲ ಕಾರ್ಯಕ್ರಮ ವಿಜ್ರಂಭಣೆಯಿಂದ ನಡೆಯಿತು.

ಹರಿವಾಣೋತ್ಸವದ ನಿಮಿತ್ಯ ಕಳೆದ ಹನ್ನೊಂದು ದಿನಗಳಿಂದ ಪ್ರತಿದಿನ ಮುಂಜಾನೆ 4 ಘಂಟೆಯಿಂದ 7-30 ವರೆಗೆ ನಡೆಯುತ್ತಿರುವ ರುದ್ರಾಭಿಷೇಕ, ಮಹಾಪೂಜೆಯ ಮಂಗಲೋತ್ಸವಕ್ಕೆ ಗ್ರಾಮದ ರೈತರು, ಮಹಿಳೆಯರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ನಂತರ ನಡೆದ ಪಲ್ಲಕ್ಕಿ ಉತ್ಸವದಲ್ಲಿ ಜಗಜ್ಯೋತಿ ಶ್ರೀ ಬಸವಣ್ಣನವರ ಭಾವಚಿತ್ರವನ್ನು ಅಲಂಕೃತ ಪಲ್ಲಕ್ಕಿಯಲ್ಲಿಟ್ಟು, ಮಹಿಳೆಯರಿಂದ ಆರತಿ, ಕುಂಭಮೇಳ, ಸಕಲ ವಾದ್ಯ ವೃಂದಗಳೊಂದಿಗೆ ಬಸ್ ನಿಲ್ದಾಣದ ಹತ್ತಿರವಿರುವ ಬಸವೇಶ್ವರ ವೃತ್ತದಿಂದ ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದವರೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಸವಣ್ಣನವ ಜಯಘೋಷ ಮಾಡಲಾಯಿತು. ಪ್ರಭುಲಿಂಗೇಶ್ವರ ದೇವಸ್ಥಾನದಲ್ಲಿ ನಡೆದ ಹರಿವಾಣ ತುಂಬುವ ಕಾರ್ಯಕ್ರಮದಲ್ಲಿ ಗ್ರಾಮದ ರೈತರು ತಾವು ಬೆಳೆದ ಕಬ್ಬು, ಬಾಳೆ, ತೆಂಗು ಸೇರಿದಂತೆ ವಿವಿಧ ಹಣ್ಣು ಹಂಪಲುಗಳ ರಾಶಿಗಳಿಂದ ಹರಿವಾಣ ತುಂಬಿಸಲಾಗುತ್ತದೆ. ಕೆಳಗೆ ಬಿದ್ದ ಹರಿವಾನ ಯಾರಿಗೆ ದೊರೆಯುವುದೋ ಅವರ ಇಷ್ಟಾರ್ಥಗಳನ್ನು ಪ್ರಭುಲಿಂಗೇಶ್ವರ, ಬಸವಣ್ಣನವರು ನೆರವೇರಿಸುತ್ತಾರೆಂಬ ಪ್ರತೀತಿ ಇದೆ. ಇದರೊಂದಿಗೆ ಹರಿವಾಣದ ನಿಮಿತ್ಯ ಕಳೆದ ಹತ್ತು ದಿನಗಳಿಂದ ಸ್ಥಳಿಯ ಗದ್ದಿಗೆ ಗುಡಿಯಲ್ಲಿ ನಡೆಯುತ್ತಿರುವ ರುದ್ರಾಭಿಷೇಕ ವಿಶೇಷ ಪೂಜೆಯೊಂದಿಗೆ ಮಹಾ ಮಂಗಲಗೊಂಡಿತು. ವಿರಕ್ತಮಠದ ಪ್ರಭು ಮಹಾಸ್ವಾಮಿಗಳು, ರಘುನಾಥ ಪ್ರಿಯ ಸಾಧು ಮಹಾರಾಜರ ಮಠದ ಜನಾರ್ಧನ ಮಹಾರಾಜರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ, ಪುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ರಾಮಣ್ಣ ಬಗನಾಳ, ರಾಚಯ್ಯ ಮಠಪತಿ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಶಂಕರ ಬಟಕುರ್ಕಿ, ಪ್ರಭು ಪಾಲಭಾಂವಿ, ಅಶೋಕ ಧಡೂತಿ, ಪರಪ್ಪ ನೇಸೂರ, ಬಸವರಾಜ ಕುಂಚನೂರ, ಅಶೋಕ ಮೋಟಗಿ, ಪ್ರಭು ಮುಧೋಳ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.



# ಐಎಎಸ್ ಅಧಿಕಾರಿ ಶಿವಾನಂದ ಜಾಮದಾರಗೆ ಪತ್ನಿ ವಿಯೋಗ



**ಬೆಳಗಾವಿ :** ಶರಣೆ ಶ್ರೀಮತಿ ನಿರ್ಮಲಾ ಶಿ. ಜಾಮದಾರ ಅವರು ಏಪ್ರಿಲ್ 26 ರಂದು ಬೆಳಗ್ಗೆ ಬೆಂಗಳೂರಿನಲ್ಲಿ ತಮ್ಮ 70 ನೆಯ ವಯಸ್ಸಿನಲ್ಲಿ ಲಿಂಗೈಕ್ಯರಾಗಿದ್ದಾರೆ. ಅವರ ಅಂತ್ಯಕ್ರಿಯೆ ಬೆಳಗಾವಿಯಲ್ಲಿ ಸೋಮವಾರ ಏಪ್ರಿಲ್ 28 ರಂದು ಮಧ್ಯಾಹ್ನ ಸದಾಶಿವನಗರದ ರುದ್ರಭೂಮಿಯಲ್ಲಿ ಜರುಗಲಿದೆ. ಲಿಂಗೈಕ್ಯರಾದ ಶರಣೆ ಶ್ರೀಮತಿ ನಿರ್ಮಲಾ ಅವರು ನಿವೃತ್ತ ಹಿರಿಯ ಐ. ಎ. ಎಸ್. ಅಧಿಕಾರಿ, ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಶರಣ ಶ್ರೀ ಡಾ. ಶಿವಾನಂದ ಜಾಮದಾರ ಅವರ ಧರ್ಮಪತ್ನಿಯಾಗಿದ್ದಾರೆ. ಮೃತರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಬಸವಾದಿ ಶರಣರು ಅವರ ಕುಟುಂಬಕ್ಕೆ ಕರುಣಿಸಲಿ ಎಂದು ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ಭಕ್ತರ ಮನೆಯ ಅಂಗಳ ಗುರುಗಳಿಗೆ ರಾಮೇಶ್ವರ: ಶಿವಾನಂದ ಶ್ರೀಗಳು





**ಜಮಖಂಡಿ :** ಸದ್ಭಾವನಾ ಪಾದ ಯಾತ್ರೆ ಹೊಸತನ ತಂದು ಕೊಡುತ್ತದೆ. ಗುರುಗಳೇ ಭಕ್ತರ ಮನೆಗೆ ಹೋಗುವುದು ಇಂದಿನ ಅನಿವಾರ್ಯತೆ. ಗುರುಮಠದ ಅಂಗಳ ಭಕ್ತರ ಅಂಗಳ. ಭಕ್ತರ ಮನೆಯ ಅಂಗಳ ಗುರುಗಳಿಗೆ ಕಾಶಿ, ರಾಮೇಶ್ವರ ಎಂದು ಹಂದಿಗುಂದದ ಸಿದ್ಧೇಶ್ವರ ಮಠದ ಶಿವಾನಂದ ಮಹಾಸ್ವಾಮಿಗಳು ಹೇಳಿದರು.

ಬಸವ ಜಯಂತಿ ನಿಮಿತ್ಯ ನಗರದ ಓಲೇಮಠದ ಆಶ್ರಯದಲ್ಲಿ ಏಪ್ರಿಲ್ 15 ರಿಂದ 29 ರ ವರೆಗೆ ಹಮ್ಮಿಕೊಂಡಿದ್ದ ಶರಣರ ವಚನ ಪ್ರವಚನ ಹಾಗೂ ಸದ್ಭಾವನಾ ಪಾದಯಾತ್ರೆ ಅಂಗವಾಗಿ ಜರುಗಿದ ವಚನ ಜಾತ್ರಾ ಮಹೋತ್ಸವದ ಮಂಗಳವಾರ ಸಂಜೆ ನಡೆದ ವಚನ ಪ್ರವಚನ ಮಹಾಮಂಗಲ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಶ್ರೀಮಠ ಮಾಡಿದ ಸಂಕಲ್ಪ ಮತ್ತು ಆಲೋಚನೆಗಳು ಎಲ್ಲಿಯಾದರೂ ಹಾರಿ ಹೋಗುವುದಿಲ್ಲ. ಒಂದಿಲ್ಲ ಒಂದು ಕಡೆಗೆ ಹೋಗಿ ಮುಟ್ಟುತ್ತವೆ. ಆ ನಿಟ್ಟಿನಲ್ಲಿ ಗುರುಗಳು ನಿಜವಾದ ಭಕ್ತರ ಮಕ್ಕಳಾಗಬೇಕು. ಗುರು-ಭಕ್ತರ ಸಂಬಂಧ ಬಹಳ ವಿಶಿಷ್ಟ. ನಾವು ತಪ್ಪು ಮಾಡಿ ಬೇರೆಯವರ ಕಡೆಗೆ ಬೆರಳು ತೋರಿಸುವ ಬದಲಾಗಿ, ಕೈ ಜೋಡಿಸಿ ಕೆಲಸ ಮಾಡಿದರೆ ಸಮಾಜಕ್ಕೆ ಬಲ ಬರುತ್ತದೆ ಎಂದು ಆಶೀರ್ವಚನ ನೀಡಿದರು.

ಉಗರಗೋಳ ನಿರ್ವಾಣೇಶ್ವರ ಮಠದ ಮಹಾಂತ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಸರ್ಕಸ್ ಮಾಡುವವರು ಬಹಳ ಇದ್ದಾರೆ. ಆದರೆ ಮನೆ ಮನೆಗಳಿಗೆ ಹೋಗಿ ಸರ್ವಿಸ್ ಮಾಡುವವರು ವಿರಳ. ಅಂತಹ ವಿರಳರಲ್ಲಿ ಓಲೇಮಠದ ಆನಂದ ದೇವರು ಶ್ರೀಗಳು ಒಬ್ಬರಾಗಿದ್ದಾರೆ. ಬಸವ ತತ್ವವನ್ನು ಪ್ರಸಾರ ಮಾಡುವ ಹಾಗೂ ಭಕ್ತರಿಂದ ಭಕ್ತಿಯನ್ನು ಮಾತ್ರ ಕೇಳುವ ಶ್ರೀಗಳ ಕಾರ್ಯ ಸ್ತುತ್ಯವಾಗಿದೆ ಎಂದರು.

ನ್ಯಾಯವಾದಿ ಎನ್. ಎಸ್. ದೇವರವರ ಸದ್ಭಕ್ತರ ಪರವಾಗಿ ಮಾತನಾಡಿ, ಭಕ್ತರ ಗುಣ ಸ್ವಭಾವ ಪರಿವರ್ತನೆಗೆ ವಚನ ಜಾತ್ರಾ ಮಹೋತ್ಸವ ಪೂರಕವಾಗಿತ್ತು. ಓಲೇಮಠದ ಗತವೈಭವ ಮರುಕಳಿಸಿದೆ ಎಂದರು.

ಕೊಣ್ಣೂರಿನ ಹೊರಗಿನ ಕಲ್ಯಾಣ ಮಠದ ಡಾ. ವಿಶ್ವಪ್ರಭು ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡಿದರು. ಕಲ್ಯಾಣ ಮಠದ ಗೌರಿಶಂಕರ ಶ್ರೀಗಳು, ವಿಜಯಪುರ ಜ್ಞಾನ ಯೋಗಾಶ್ರಮದ ಬಸವರಾಜ ಶ್ರೀಗಳು ಸಾನಿಧ್ಯ ವಹಿಸಿದ್ದರು.

ಹದಿನೈದು ದಿನಗಳ ಕಾಲ ವಚನ ಪ್ರವಚನ ಸೇವೆ ಸಲ್ಲಿಸಿದ ಝುಂಜರವಾಡದ ಬಸವರಾಜೇಂದ್ರ ಶರಣರಿಗೆ ಅಭಿನಂದನ ಪತ್ರ ನೀಡಿ ಗೌರವಿಸಲಾಯಿತು. ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಅಭಿನಂದನ ಪತ್ರ ಓದಿದರು.

ಹೆಸ್ಕಾಂ ಎಇಇ ವಿಶಾಲ ಧರೆಪ್ಪಗೋಳ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬಸವರಾಜ ಬಿರಾದಾರ, ಗೌರಿ ಗಣೇಶ ಮಹಿಳಾ ಮಂಡಳದ ಅಧ್ಯಕ್ಷೆ ಉಮಾ ಸೋನಾರ, ಉಪಾಧ್ಯಕ್ಷೆ, ಕವಿತಾ ಗಾಣಿಗೇರ, ಶಕುಂತಲಾ ಮೈತ್ರಿ, ವಿಶ್ವಕರ್ಮ ಸಮಾಜದ ಅಶೋಕ ಬಡಿಗೇರ, ಚಂದ್ರಶೇಖರ ವೇದಪಾಠಕ ಉಪಸ್ಥಿತರಿದ್ದರು.

ಅಂಧ ಕಲಾವಿದ ರಾಮಸ್ವಾಮಿ ವಚನ ಪ್ರಾರ್ಥನೆ ಸಲ್ಲಿಸಿದರು.

ಓಲೇಮಠದ ಆನಂದ ದೇವರು ಶ್ರೀಗಳು ಸ್ವಾಗತಿಸಿದರು. ಪೃಥ್ವಿ ಮಠದ, ಅನು ಕೆರಕಲಮಟ್ಟಿ, ವಿಶಾಲ ವಾಜಂತ್ರಿ ವಚನ ವಾಚನ ಮಾಡಿದರು. ವಿಜಯಲಕ್ಷ್ಮಿ ಲಕ್ಷೆಟ್ಟಿ ಸ್ವರಚಿತ ಕವನ ವಾಚಿಸಿದರು. ಶಂಕರ ಲಮಾಣಿ ಸ್ವಾಗತಿಸಿದರು. ಚಂದ್ರಶೇಖರ ಜತ್ತಿ, ಶಿವಾನಂದ ಕಲ್ಯಾಣಿ ಸೊಗಸಾಗಿ ನಿರೂಪಿಸಿದರು. ಶಿವಾನಂದ ಕೊಣ್ಣೂರ ವಂದಿಸಿದರು.

# ವಿಶ್ವ ಗುರು ಬಸವಣ್ಣವರ ಜನ್ಮ ಜಯಂತಿ



**ಮೂಡಲಗಿ :** 12ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಗೆ ಕಾರಣರಾದ ಮಹಾನ್ ವ್ಯಕ್ತಿಗಳಲ್ಲಿ ಜಗಜ್ಯೋತಿ ಬಸವಣ್ಣನವರು ಒಬ್ಬರು. ಬಸವಣ್ಣರು ಪ್ರತಿಪಾದಿಸಿದ ಸಮಾನತೆ, ಸಾಮಾಜಿಕ ನ್ಯಾಯ, ಕಾಯಕ ಯೋಗ, ಮಹಿಳಾ ಸಬಲೀಕರಣ,

ದಲಿತೋದ್ಧಾರ ಮತ್ತು ಸಾಮಾಜಿಕ ಕ್ರಾಂತಿಯ ಸಂದೇಶವನ್ನು ಜನತೆಗೆ ನೀಡುವುದು ಶ್ರೀ ಬಸವೇಶ್ವರರ ಜನ್ಮ ಜಯಂತಿ ಆಚರಣೆಯ ಮೂಲ ಉದ್ದೇಶವಾಗಿದೆ ಎಂದು ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸಗೌಡ ಪಾಟೀಲ ಹೇಳಿದರು.

ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ಶ್ರೀ ಬಸವೇಶ್ವರರ ಜನ್ಮ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಾಚಾರ್ಯ ಡಾ. ಸುರೇಶ ಸುರೇಶ ಹನಗಂಡಿ ಮಾತನಾಡಿ,

12ನೇ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯು ಇಂದು ನಾವು ಎದುರಿಸುತ್ತಿರುವ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಉತ್ತರ ನೀಡುತ್ತದೆ. ಅರ್ಥಹೀನ ಆಚರಣೆಗಳು ಮತ್ತು ವಿಗ್ರಹಾರಾಧನೆಯನ್ನು ತಿರಸ್ಕರಿಸಿದರು, ಭಕ್ತ ಮತ್ತು ದೇವರ ನಡುವಿನ ನೇರ ಸಂಪರ್ಕವನ್ನು ಉತ್ತೇಜಿಸಿದರು. ಬಸವಣ್ಣನವರು ಅನುಭವ ಮಂಟಪವನ್ನು ಸ್ಥಾಪಿಸುವ ಮೂಲಕ ಸರ್ವ ಸಮಾನತೆ, ಪ್ರಜಾಪ್ರಭುತ್ವದ ಕಲ್ಪನೆಯ ಸಂದೇಶವನ್ನು ನೀಡಿದ್ದಾರೆ ಎಂದರು.

ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ಡಾ. ಕೆ.ಎಸ್. ಪರವ್ವಗೋಳ, ಡಾ. ಎಂ.ಬಿ. ಕುಲಮೂರ, ಬಿ.ಬಿ. ವಾಲಿ, ಡಿ.ಎಸ್. ಹುಗ್ಗಿ, ಆರ್.ಎಸ್. ಪಂಡಿತ, ವಿ.ಪಿ. ಕೆಳಗಡೆ, ಸಂತೋಷ ಬಂಡಿ, ಸಾಗರ ಐದಮನಿ, ಎಂ.ಬಿ. ಜಾಲಗಾರ ಇನ್ನಿತರರು ಉಪಸ್ಥಿತರಿದ್ದರು.



ಬಳ್ಳಾರಿ : ಸಂಗನಕಲ್ಲು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ನರೇಗಾ ಕೂಲಿಕಾರರಿಂದ ಕೆಲಸ ಮಾಡುವ ಸ್ಥಳದಲ್ಲಿ ಕೇಕ್ ಕತ್ತರಿಸುವ ಮೂಲಕ ವಿಶ್ವ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು.
ಈ ಸಂದರ್ಭದಲ್ಲಿ ಸಂಗನಕಲ್ಲು ಪಂಚಾಯತ ಅಭಿರುದ್ಧಿ ಅಧಿಕಾರಿಗಳು ಎಮ್ ಆದಿಲಕ್ಷ್ಮೀ, ಸಂಗನಕಲ್ಲು ಗ್ರಾಮ ಪಂಚಾಯತ್ ಅಧ್ಯಕ್ಷರಾದ ವಿ ಗೋವಿಂದಮ್ಮ ನಾಗಿರೆಡ್ಡಿ , ಉಪಾಧ್ಯಕ್ಷರಾದ ಬಿ ಮಾರೆಕ್ಕ ದೊಡ್ಡ ಹನುಮಂತ ಮತ್ತು ಸದ್ಯಸರು ರೈತರ ಸಂಘದ ಜಿಲ್ಲಾ ಅಧ್ಯಕ್ಷ ರಾದ ಯು ಕೃಷ್ಣ ಮೂರ್ತಿ ಹಾಗೂ ರೈತ ಮುಖಂಡರು, ಮೇಟಿಗಳು ನರೇಗಾ ಕೂಲಿ ಕರಾರು, ತಾಂತ್ರಿಕ ಸಹಾಯಕರು ಸೇರಿದಂತೆ ಪಂಚಾಯತಿ ಸಿಬ್ಬಂದಿಗಳು ಇದ್ದರು.

# ಬಿ.ಟಿ.ಪಿ.ಎಸ್ ಗುತ್ತಿಗೆ ಕಾರ್ಮಿಕರ ಸಂಘದಿಂದ 139ನೇ ವಿಶ್ವ ಕಾರ್ಮಿಕ ದಿನಾಚರಣೆ



**ಬಳ್ಳಾರಿ:** ತಾಲೂಕಿನ ಕುಡುತಿನಿ ಪಟ್ಟಣದಲ್ಲಿ ಇತಿಹಾಸಿಕ ಭೂ ಸಂತ್ರಸ್ತರ ರೈತರ 865 ನೇ ದಿನದ ಹೋರಾಟದ ವೇದಿಕೆಯಲ್ಲಿ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕಮ್ಯುನಿಸ್ಟ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಕಟ್ಟಡ ಕಾರ್ಮಿಕ ಸಂಘದ ಗೌರವಾಧ್ಯಕ್ಷ ವಾಸು ದುಡಿಯುವ ಕೈಗಳಿಗೆ ಕೆಲಸ ಬೇಕು ಕೆಲಸಕ್ಕೆ ತಕ್ಕಂತೆ ವೇತನ ಮತ್ತು ಇತರ ಸೌಲಭ್ಯಗಳನ್ನು ಕಾರ್ಮಿಕರಿಗೆ ನೀಡಬೇಕು ಹಾಗೂ ಈ ದಿನವನ್ನು ಒಂದು ಕ್ರಾಂತಿಕಾರಿ ದಿನವನ್ನಾಗಿ ಇಡಿ ರಾಷ್ಟ್ರದಲ್ಲಿ ಜಗತ್ತಿನಲ್ಲಿಯೇ ಆಚರಿಸಲಾಗುತ್ತಿದೆ. ಶ್ರಮಕರಿಂದಲೇ ಜಗತ್ತು ನಡೆಯುತ್ತಿದೆ ಎನ್ನುವುದು ಬಂಡವಾಳ ಶಾಹಿಗಳು ಅರ್ಥ ಮಾಡಿಕೊಂಡು ಶೋಷಣೆ ನಿಲ್ಲಲಿಸಬೇಕೆಂದರು.

ನಂತರ ಃಣಥಿ ಗುತ್ತಿ ಗೆ ಕಾರ್ಮಿಕ ಸಂಘದ ಅಧ್ಯಕ್ಷ ಎಂ. ತಿಪ್ಪೇಸ್ವಾಮಿ ಮಾತನಾಡಿ, ಕಾರ್ಮಿಕರ ಕನಿಷ್ಠ ವೇತನ 36,000 ನಿಗದಿ ಮಾಡಬೇಕು ಹಾಗೂ ಕೇಂದ್ರ ಸರಕಾರ ನೂತನ ಕೈಗಾರಿಕಾ ಸಂಹಿತೆಗಳು ಕೂಡಲೇ ಕೈಬಿಡಬೇಕೆಂದು ಅಗ್ರಹಿಸಿದರು.

ಮೇ 20ರಂದು ನಡೆಯುವ ಕಾರ್ಮಿಕ ಮುಷ್ಕರದಲ್ಲಿ ಎಲ್ಲಾ ದುಡಿಯುವ ನೌಕರರು ತಪ್ಪದೆ ಭಾಗವಹಿಸಿಬೇಕು ಎಂದು ಈ ಸಂದರ್ಭದಲ್ಲಿ ಕರೆನೀಡಿದರು. ವೇದಿಕೆಯಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚನ್ನಬಸವಯ್ಯ. ಸಿಐಟಿಯು ಜಿಲ್ಲಾ ಸಮಿತಿ ಜಂಟಿ ಕಾರ್ಯದರ್ಶಿ ತಿಪ್ಪೇಸ್ವಾಮಿ, ಕಟ್ಟಡ ಕಾರ್ಮಿಕ ಸಂಘದ ವಾಸು ಭೂ ಸಂತ್ರಸ್ತರ ರೈತರ ಹೋರಾಟ ಸಮಿತಿ ಹಿರಿಯ ಮುಖಂಡ ಜಂಗ್ಲಿ ಸಾಬು, ಡಿವೈಎಫ್ಐ ಜಿಲ್ಲಾ ಕಾರ್ಮಿಕ ಮಹಿಳಾ ಮುಖಂಡರಾದ ರುದ್ರಮ್ಮ. ಹುಚ್ಚಮ್ಮ. ಹುಲಿಗೆಮ್ಮ ಸೇರಿದಂತೆ ಮೊದಲಾದವರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618